# ಕನ್ನಡ ಪೋಸ್ಟ್

ಇದು ಸುದ್ದಿ ವಿಳಾಸ

ಸಂಪಾದಕ : ಮಂಜು ಬನವಾಸೆ

KANNADA POST

ಕನ್ನಡ ದಿನ ಪತ್ರಿಕೆ Kannada Daily

ಹಾಸನ E-mail : kannadapostnews@gmail.com / ಕನ್ನಡ post Price: ₹1

Vol.No.01 | Issue. 217 | Pages. 2 | Date: 08-07-2025, TUESDAY RNI NO: KARKAN/2024/89601

ಸಂಪುಟ : 01 - ಸಂಚಿಕೆ : 217 - ಪುಟಗಳು : 2 - 08 ಜುಲೈ 2025 ಮಂಗಳವಾರ Ph: 8762954248 ದರ : ₹1


# ಕುರ್ಚಿಗಾಗಿ ಜನಹಿತ ಮರೆತ ಸರ್ಕಾರ

## ಅಧಿಕಾರಕ್ಕಾಗಿ ಕಾಂಗ್ರೆಸ್ಸಿಗರ ಹೆಣಗಾಟ | ವಿರೋಧ ಪಕ್ಷದ ನಾಯಕ ಅಶೋಕ್ ವಾಗ್ದಾಳಿ

**ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್**

ಹಾಸನ: ಮುಖ್ಯಮಂತ್ರಿ ಸಿದ್ದರಾಮಯ್ಯ ಕುರ್ಚಿ ಉಳಿಸಿಕೊಳ್ಳಲು ಏನೇನೋ ತಂತ್ರ ಮಾಡುತ್ತಿದ್ದರೆ ಉಪಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಹೋಮ ಹವನದಲ್ಲಿ ಮುಳುಗಿದ್ದಾರೆ. ಜನರು ಮಾತ್ರ ಹೃದಯಾಘಾತದಿಂದ ಸಾಯುತ್ತಿದ್ದಾರೆ ಎಂದು ವಿರೋಧ ಪಕ್ಷದ ನಾಯಕ ಆರ್. ಅಶೋಕ್ ಆಕ್ರೋಶ ವ್ಯಕ್ತಪಡಿಸಿದರು.

ನಗರದ ಜಿಲ್ಲಾ ಬಿಜೆಪಿ ಕಚೇರಿಯಲ್ಲಿ ಸೋಮವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿ, ಜಿಲ್ಲೆಯಲ್ಲಿ ಹೃದಯಾಘಾತದಿಂದ ಸಾವು ಸಂಭವಿಸುತ್ತಿರುವ ಕುರಿತು ಕೇಂದ್ರ ಸರ್ಕಾರ ವರದಿ ಕೇಳಿದರೂ ಆರೋಗ್ಯ, ವೈದ್ಯಕೀಯ ಅಥವಾ ಜಿಲ್ಲಾ ಉಸ್ತುವಾರಿ ಸಚಿವರು ಭೇಟಿ ನೀಡದೆ ಉಡಾಫೆಯಿಂದ ವರ್ತಿಸುತ್ತಿದ್ದಾರೆ. ಜನರು ಸತ್ತರೂ ಪರವಾಗಿಲ್ಲ ತಮ್ಮ ಕುರ್ಚಿ ಉಳಿದರೆ ಸಾಕೆಂಬ ಮನಸ್ಥಿತಿಯಲ್ಲಿದ್ದಾರೆ ಎಂದರು.

ಹಾಸನದ ಜವಾಬ್ದಾರಿ ಬೇಡವೆಂದರೂ ಜಿಲ್ಲಾ ಉಸ್ತುವಾರಿ ಸಚಿವರನ್ನು ಬದಲಿಸುತ್ತಿಲ್ಲ. ಹೃದಯಾಘಾತ, ಬೆಳೆ ನಷ್ಟದಿಂದ ಜನರು ಸತ್ತರೂ ಪರವಾಗಿಲ್ಲವೆಂಬ ಸ್ಥಿತಿಗೆ ರಾಜ್ಯ ಸರ್ಕಾರ ತಲುಪಿದೆ. ಮುಖ್ಯಮಂತ್ರಿ ಸಿದ್ದರಾಮಯ್ಯ ಕುರ್ಚಿ ಉಳಿಸಿಕೊಳ್ಳಲು ತಮ್ಮದೇಯಾದ ಯೋಜನೆಯಲ್ಲಿದ್ದಾರೆ. ಉಪಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಆ ಸ್ಥಾನಕ್ಕಾಗಿ ನಿತ್ಯ ಪೂಜೆ, ಹೋಮ ಹವನದಲ್ಲಿ ಮಗ್ನರಾಗಿದ್ದಾರೆ. ಇನ್ನು ಉಳಿದ ಸಚಿವರು ಕುರ್ಚಿ ಯಾವಾಗ ಹೋಗುತ್ತದೆ, ದೆಹಲಿ ನಾಯಕರಿಗೆ ಎಷ್ಟು ಕೊಡಬೇಕೆಂದು ಲೆಕ್ಕಾಚಾರ ಹಾಕುತ್ತಿದ್ದಾರೆ. ಪ್ರತಿದಿನ ಹೃದಯಾಘಾತದಿಂದ ಇಷ್ಟೊಂದು ಸಾವಾಗುತ್ತಿದೆಯೆಂದು ಜನರಿಗೆ ಭಯಭೀತಿ ಇದೆ ಹೊರತು ಈ ಸರ್ಕಾರಕ್ಕೆ ಯಾವ ಭಯವೂ ಇಲ್ಲ ಎಂದು ಆಕ್ರೋಶ ವ್ಯಕ್ತಪಡಿಸಿದರು.

ಜನಹಿತ ಮರೆತಿರುವ ಸರ್ಕಾರದ ವಿರುದ್ಧ ಬಿಜೆಪಿ ದಾಖಲೆ ಹೋರಾಟ ಮಾಡಿದೆ. ಇತಿಹಾಸದಲ್ಲಿ ಬಿಜೆಪಿ ಎಂದಿಗೂ ಮಾಡದಂತಹ ಪ್ರತಿಭಟನೆಗಳನ್ನು ಕಳೆದ ಎರಡೂವರೆ ವರ್ಷಗಳಲ್ಲಿ ಮಾಡಿದೆ. ಇಲ್ಲದಿದ್ದರೆ ಸಿದ್ದರಾಮಯ್ಯ 14 ನಿವೇಶನ ವಾಪಸ್ ಕೊಡುತ್ತಿರಲಿಲ್ಲ. ವಾಲ್ಮೀಕಿ ಹಗರಣದಲ್ಲಿ ಶಾಸಕ ನಾಗೇಂದ ಬಂಧನವಾಗುತ್ತಿರಲಿಲ್ಲ. ಪ್ರಕರಣವನ್ನು ಸಿಬಿಐಗೆ ವಹಿಸುತ್ತಿರಲಿಲ್ಲ. ಜನರ ಧ್ವನಿಯಾಗಿ ಬಿಜೆಪಿ ಹೋರಾಟ ಮಾಡಿರುವುದರಿಂದಲೇ ಇದೆಲ್ಲ ಸಾಧ್ಯವಾಗಿದೆ ಎಂದು ಪ್ರಶ್ನೆಯೊಂದಕ್ಕೆ ಪ್ರತಿಕ್ರಿಯಿಸಿದರು.

ಬಿಜೆಪಿಯಲ್ಲಿ ಯಾವುದೇ ಭಿನ್ನಾಭಿಪ್ರಾಯಗಳಿಲ್ಲ. ರಾಜ್ಯಾಧ್ಯಕ್ಷ ಬಿ.ವೈ. ವಿಜಯೇಂದ್ರ ಅವರ ನೇತೃತ್ವದಲ್ಲಿ ಪಕ್ಷ ಸಂಘಟನೆ ಉತ್ತಮವಾಗಿ ಆಗುತ್ತಿದೆ. ಪ್ರತಿ ಮೂರು ತಿಂಗಳಿಗೊಮ್ಮೆ ವರದಿ ಸಲ್ಲಿಸುವಂತೆ ಗೃಹ ಸಚಿವ ಅಮಿತ್ ಶಾ ಅವರು ಸೂಚಿಸಿರುವುದರಿಂದ ದೆಹಲಿಗೆ ಹೋಗುತ್ತೇನೆ ಎಂದರು.

ರಾಜ್ಯಾಧ್ಯಕ್ಷ ಬದಲಾವಣೆ ಕುರಿತು ಇಲ್ಲಿವರೆಗೆ ಯಾವ ಚರ್ಚೆಗಳು ನಡೆದಿಲ್ಲ. ಬೇರೆ ರಾಜ್ಯಗಳಲ್ಲಿ ಅಧ್ಯಕ್ಷರ ಆಯ್ಕೆ ಪ್ರಕ್ರಿಯೆ ನಡೆಯುತ್ತಿದೆ. ಪ್ರಧಾನಿ ಮೋದಿ ವಿದೇಶ ಪ್ರವಾಸದಿಂದ ವಾಪಾಸ್ ಬಂದ ಮೇಲೆ ಕರ್ನಾಟಕದಲ್ಲಿ ಪಕ್ಷದ ಅಧ್ಯಕ್ಷರ ಆಯ್ಕೆ ಕುರಿತು ಚರ್ಚೆಗಳು ನಡೆಯಬಹುದು. ಚುನಾವಣೆಯೋ ಅಥವಾ ನೇಮಕವೋ ಎಂಬುದರ ಕುರಿತು ಮಾಹಿತಿ ಇಲ್ಲ. ರಾಷ್ಟ್ರೀಯ ಅಧ್ಯಕ್ಷರ ಆಯ್ಕೆ ಮೊದಲೇ ನಡೆದರೆ ರಾಜ್ಯಾಧ್ಯಕ್ಷರ ನೇಮಕ ಮಾಡಲಾಗುತ್ತದೆ. ಒಂದು ವೇಳೆ ರಾಜ್ಯಾಧ್ಯಕ್ಷರ ಆಯ್ಕೆಯೇ ಮೊದಲು ಎಂದರೆ ಚುನಾವಣೆ ನಡೆಸುವುದು ಪಕ್ಷದ ಪದ್ಧತಿ. ರಾಷ್ಟ್ರ ನಾಯಕರು ಏನು ತೀರ್ಮಾನ ಮಾಡುತ್ತಾರೆಂಬುದರ ಕುರಿತು ಮಾಹಿತಿ ಇಲ್ಲ ಎಂದರು.




### ಅವರನ್ನೇ ಕೇಳಿ

ಬಿಜೆಪಿ-ಜೆಡಿಎಸ್ ಹಾಲು ಜೇನಿನಂತೆ ಒಂದಾಗಿ ಕೆಲಸ ಮಾಡುತ್ತಿದ್ದೇವೆ. ಮೈತ್ರಿ ಭದ್ರವಾಗಿದ್ದು ಮುಂಬರುವ ಎಲ್ಲಾ ಚುನಾವಣೆಗಳನ್ನು ಒಟ್ಟಾಗಿ ಎದುರಿಸುತ್ತೇವೆ. ಹಾಸನದ ಮೈತ್ರಿ ಭವಿಷ್ಯದ ಕುರಿತು ಸ್ಥಳೀಯ ನಾಯಕರಿಂದಲೇ ಮಾಹಿತಿ ಪಡೆಯಿರಿ ಎಂದು ಆರ್. ಅಶೋಕ್ ಪ್ರತಿಕ್ರಿಯಿಸಿದರು.

ಶಾಸಕ ಸಿಮೆಂಟ್ ಮಂಜು, ಬಿಜೆಪಿ ಜಿಲ್ಲಾಧ್ಯಕ್ಷ ಸಿದ್ದೇಶ್ ನಾಗೇಂದ್ರ, ಪ್ರಧಾನ ಕಾರ್ಯದರ್ಶಿ ಅಮಿತ್ ಶೆಟ್ಟಿ, ಎಸ್‌ಸಿ ಮೋರ್ಚಾ ಜಿಲ್ಲಾಧ್ಯಕ್ಷ ಚಂದ್ರು, ರೈತ ಮೋರ್ಚಾ ಜಿಲ್ಲಾಧ್ಯಕ್ಷ ನಾರಾಯಣಗೌಡ ಇದ್ದರು.

> ಜಿಲ್ಲೆಯಲ್ಲಿ ಮುಸುಕಿನ ಜೋಳ, ಕಾಫಿ, ಮೆಣಸು, ಅಡಕೆ ಬೆಳೆ ಹಾನಿಯಾಗಿದ್ದು ಅಂದಾಜು 2 ಸಾವಿರ ಕೋಟಿ ರೂ. ಪರಿಹಾರ ನೀಡಬೇಕಾಗುತ್ತದೆ. ಕೇವಲ ಹಾಸನ ಜಿಲ್ಲೆಯೊಂದರಲ್ಲೇ ಇಷ್ಟೊಂದು ಸಮಸ್ಯೆ ಇರುವಾಗ ಬೇರೆ ಜಿಲ್ಲೆಗಳ ಪರಿಸ್ಥಿತಿ ಹೇಗಿರಬೇಕು. ಸಂಬಂಧಪಟ್ಟ ಸಚಿವರು ಸ್ಥಳಕ್ಕೆ ಭೇಟಿ ನೀಡಿ ಜನರ ಸಮಸ್ಯೆ ಕೇಳಿಲ್ಲ. ಈ ವಿಚಾರವನ್ನು ಬಿಜೆಪಿ ಗಂಭೀರವಾಗಿ ಪರಿಗಣಿಸಿದ್ದು ಸರ್ಕಾರದ ವಿರುದ್ಧ ಹೋರಾಟ ನಡೆಸಲಾಗುವುದು.
>
> **-ಆರ್. ಅಶೋಕ್, ವಿರೋಧ ಪಕ್ಷದ ನಾಯಕ**

## ಅಧಿಕಾರಿಗಳ ಸಸ್ಪೆಂಡ್ ಖಚಿತ



ಜಿಲ್ಲೆಯಲ್ಲಿ ಸಂಭವಿಸುತ್ತಿರುವ ಸರಣಿ ಹೃದಯಾಘಾತ ಪ್ರಕರಣಕ್ಕೆ ನಿಖರ ಕಾರಣ ಅರಿತು ಸೂಕ್ತ ಉತ್ತರ ಕೊಡದಿದ್ದರೆ ನೀವುಗಳು ಅಮಾನತು ಶಿಕ್ಷೆಗೆ ಗುರಿಯಾಗುವುದು ಖಚಿತ ಎಂದು ವಿರೋಧ ಪಕ್ಷದ ನಾಯಕ ಆರ್. ಅಶೋಕ್ ಎಚ್ಚರಿಕೆ ನೀಡಿದರು.

ನಗರದ ಹಿಮ್ಸ್ ಸಭಾಂಗಣದಲ್ಲಿ ಸೋಮವಾರ ಹೃದಯಾಘಾತ ಮರಣಗಳ ಪ್ರಗತಿ ಪರಿಶೀಲನಾ ಸಭೆಯಲ್ಲಿ ಮಾತನಾಡಿದ ಅವರು, ಜಿಲ್ಲೆಯಲ್ಲಿ 24 ಜನರು ಹೃದಯಾಘಾತದಿಂದ ಮೃತಪಟ್ಟಿದ್ದಾರೆಂದು ಹೇಳುತ್ತಿದ್ದೀರಿ. ಅದಕ್ಕೆ ಕಾರಣ ಕೇಳಿದರೆ ಕಿಡ್ನಿ ವೈಫಲ್ಯ, ಮೃತರು ಹೊರ ಜಿಲ್ಲೆಯವರು, ರಕ್ತದೊತ್ತಡದಂತಹ ಹಾರಿಕೆಯ ಉತ್ತರ ನೀಡುತ್ತಿದ್ದೀರಿ. ಮುಂದಿನ ಕೆಲವೇ ದಿನಗಳಲ್ಲಿ ವಿಧಾನಸಭೆ ಅಧಿವೇಶನ ನಡೆಯುತ್ತದೆ. ಪ್ರತಿಪಕ್ಷವಾಗಿ ಬಿಜೆಪಿ ಈ ವಿಷಯದ ಕುರಿತು ಗಂಭೀರ ಹೋರಾಟ ನಡೆಸುತ್ತದೆ. ನಾವು ಸಂಬಂಧಿಸಿದ ಸಚಿವರ ರಾಜೀನಾಮೆಗೆ ಆಗ್ರಹಿಸುತ್ತೇವೆ. ಅವರ್‍ಯಾರು ತಮ್ಮ ಕುರ್ಚಿ ಬಿಟ್ಟುಕೊಡುವುದಿಲ್ಲ. ಕೊನೆಯದಾಗಿ ನಿಮ್ಮನ್ನೇ ಸಸ್ಪೆಂಡ್ ಮಾಡಿ ಆರಾಮಾಗಿರುತ್ತಾರೆ. ಸರಣಿ ಸಾವಿಗೆ ಕಾರಣ ಏನೆಂಬುದನ್ನು ಅರಿತು ಸರ್ಕಾರಕ್ಕೆ ವರದಿ ಸಲ್ಲಿಸಬೇಕೆಂದರು. ನಿರಂತರ ಸಾವು ಸಂಭವಿಸಲು ಬಲವಾದ ಕಾರಣಗಳಿರಬೇಕು. ಬಳ್ಳಾರಿಯಲ್ಲಿ 12 ಬಾಣಂತಿಯರು ಸಾವನ್ನಪ್ಪಿದಾಗ ಅಲ್ಲಿನ ವೈದ್ಯರು ನಿಮ್ಮ ಹಾಗೆ ಉತ್ತರ ಸಿದ್ಧಪಡಿಸಿಕೊಂಡಿದ್ದರು. ವೈದ್ಯರನ್ನು ಕೆದಕಿ ಪ್ರಶ್ನಿಸಿದಾಗ ಆಗತಾನೆ ಪೂರೈಕೆಯಾಗಿದ್ದ ಔಷಧ ಕಾರಣವೆಂಬುದು ಗೊತ್ತಾಯಿತು. ಹೃದಯಾಘಾತ ಪ್ರಕರಣಗಳಿಗೂ ಯಾವುದಾದರೂ ಕಾರಣ ಇದ್ದೇ ಇರುತ್ತದೆ. ಔಷಧ ವಿತರಣೆ ಅಥವಾ ಬೆಳೆಗಳಿಗೆ ಬಳಸುವ ಕ್ರಿಮಿನಾಶಕ ಹೀಗೆ ಬೇರೆ ಬೇರೆ ಆಯಾಮಗಳಲ್ಲಿ ಅಧ್ಯಯನ ನಡೆಸುವುದು ಅಗತ್ಯವೆಂದರು.

ನಾನು 2006ರಲ್ಲಿ ಆರೋಗ್ಯ ಸಚಿವನಾಗಿದ್ದೆ. ಇಂತಹ ಪ್ರಕರಣಗಳು ಎದುರಾದಾಗ ತಪ್ಪಿಸಿಕೊಳ್ಳಲು 108 ವಿದ್ಯೆಗಳಿರುವುದು ನನಗೂ ಗೊತ್ತು. ಸಮಸ್ಯೆಯನ್ನು ಯಾವ ಕಾರಣಕ್ಕೂ ಹಗುರವಾಗಿ ಪರಿಗಣಿಸಬಾರದು. ಮೃತರ ಮನೆಗಳಿಗೆ ಭೇಟಿ ನೀಡಿ ಮಾಹಿತಿ ಕಲೆ ಹಾಕಬೇಕೆಂದು ಸೂಚನೆ ನೀಡಿದರು. ಪ್ರಗತಿ ಪರಿಶೀಲನಾ ಸಭೆ ಬಳಿಕ ಆರ್. ಅಶೋಕ್ ಅವರು ಹಿಮ್ಸ್ ತುರ್ತು ನಿಗಾ ಘಟಕಕ್ಕೆ ಭೇಟಿ ನೀಡಿ ಅಲ್ಲಿನ ವ್ಯವಸ್ಥೆ ಪರಿಶೀಲಿಸಿದರು.

ಸಕಲೇಶಪುರ ಶಾಸಕ ಸಿಮೆಂಟ್ ಮಂಜು, ಬಿಜೆಪಿ ಜಿಲ್ಲಾಧ್ಯಕ್ಷ ಸಿದ್ದೇಶ್ ನಾಗೇಂದ್ರ, ಹಿಮ್ಸ್ ನಿರ್ದೇಶಕ ಡಾ. ಬಿ.ರಾಜಣ್ಣ, ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣಾಧಿಕಾರಿ ಡಾ. ಅನಿಲ್, ಹಿಮ್ಸ್ ವೈದ್ಯಕೀಯ ಅಧೀಕ್ಷಕ ಡಾ. ರಾಘವೇಂದ್ರ ಇದ್ದರು.

## 19 ವಿಕಲಚೇತನರಿಗೆ ತ್ರಿಚಕ್ರ ವಾಹನ ವಿತರಣೆ

**ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್**



ಹಾಸನ: ರಾಜ್ಯ ಹಣಕಾಸು ಆಯೋಗ ಮತ್ತು ಮಹಾನಗರ ಪಾಲಿಕೆ ಅನುದಾನದ ಅಡಿಯಲ್ಲಿ ವಿಕಲಚೇತನರಿಗೆ ಸೋಮವಾರ ಮಹಾನಗರ ಪಾಲಿಕೆ ಆವರಣದಲ್ಲಿ ಶಾಸಕ ಹೆಚ್.ಪಿ. ಸ್ವರೂಪ್ ಅವರು ತ್ರಿ ಚಕ್ರ ವಾಹನ ವಿತರಿಸಿದರು.

ಈ ವೇಳೆ ಮಾತನಾಡಿದ ಅವರು, ಮಹಾನಗರ ಪಾಲಿಕೆ ವ್ಯಾಪ್ತಿಯಲ್ಲಿರುವ ವಿಕಲಚೇತರಿಗೆ ರಾಜ್ಯ ಹಣಕಾಸು ಆಯೋಗ ಹಾಗೂ ಮಹಾನಗರ ಪಾಲಿಕೆಯಿಂದ ಹಣ ಕಾಯ್ದಿರಿಸಿ ಅನುಕೂಲ ಕಲ್ಪಿಸುವ ಸಲುವಾಗಿ ತ್ರಿ ಚಕ್ರ ವಾಹನ ನೀಡಲಾಗುತ್ತಿದೆ ಎಂದರು.

ವಿವಿಧ ಕಾರಣಗಳಿಂದ ಅಂಗಾಂಗ ಸ್ವಾಧೀನ ಕಳೆದುಕೊಂಡಿರುವ ಮಹಿಳೆಯರು ಹಾಗೂ ಪುರುಷರು ಸಣ್ಣ ಪುಟ್ಟ ಕೆಲಸ ಮಾಡಿಕೊಂಡು ಬದುಕುತ್ತಿದ್ದಾರೆ. ಅಂತವರಿಗೆ ಓಡಾಡಲು ತ್ರಿ ಚಕ್ರ ವಾಹನಗಳು ನೆರವಾಗುತ್ತದೆ. ಫಲಾನುಭವಿಗಳು ಅದರ ಸದುಪಯೋಗ ಪಡೆಯಬೇಕು. ಜೊತೆಗೆ ಸಹಕಾರ ಬ್ಯಾಂಕ್‌ನಲ್ಲಿ ವಿಕಲಚೇತನರಿಗೆ ವಿವಿಧ ಉದ್ಯಮಕ್ಕೆ ಸಾಲ ಸೌಲಭ್ಯವೂ ಲಭ್ಯವಿದೆ. ಅವುಗಳನ್ನು ಬಳಸಿಕೊಂಡು ತಾವು ಕೂಡ ಎಲ್ಲರಂತೆ ಆರ್ಥಿಕವಾಗಿ, ಸಾಮಾಜಿಕವಾಗಿ ಮುನ್ನೆಲೆಗೆ ಬರಬೇಕು ಎಂದರು.

ಪಾಲಿಕೆ ಮೇಯರ್ ಎಂ. ಚಂದ್ರಗೌಡ ಮಾತನಾಡಿ, 19 ತ್ರಿ ಚಕ್ರ ವಾಹನ ನೀಡಲಾಗಿದೆ. ವಿಕಲಚೇತನರ ಹಿತದೃಷ್ಟಿಯಿಂದ ತ್ವರಿತಗತಿಯಲ್ಲಿ ವಾಹನಗಳನ್ನು ಒದಗಿಸಿಕೊಟ್ಟ ಸರ್ಕಾರ ಹಾಗು ಅಧಿಕಾರಿಗಳಿಗೆ ಕೃತಜ್ಞತೆ ಸಲ್ಲಿಸುತ್ತೇನೆಂದರು.

ವಿಕಲಚೇತನರ ಕಲ್ಯಾಣಕ್ಕೆ ರಾಜ್ಯ ಸರ್ಕಾರದ ಜೊತೆ ಮಹಾನಗರ ಪಾಲಿಕೆ ಕೂಡ ತನ್ನ ಅನುದಾನದಲ್ಲಿ ಹತ್ತು ಹಲವು ಕಾರ್ಯಕ್ರಮಗಳನ್ನು ಜಾರಿಗೆ ತಂದಿದೆ. ಮುಂದಿನ ದಿನಗಳಲ್ಲಿ ಅವುಗಳನ್ನು ವಿಸ್ತರಿಸುವ ನಿಟ್ಟಿನಲ್ಲಿ ಯೋಜನೆ ರೂಪಿಸಲಾಗುವುದು. ಫಲಾನುಭವಿಗಳು ಯೋಜನೆ ಸದುಪಯೋಗ ಪಡಿಸಿಕೊಳ್ಳಬೇಕೆಂದು ಮನವಿ ಮಾಡಿದರು.

ಪಾಲಿಕೆ ಉಪ ಮೇಯರ್ ಹೇಮಲತಾ, ಆಯುಕ್ತ ಕೃಷ್ಣಮೂರ್ತಿ ಹಾಗೂ ಇತರರಿದ್ದರು.

## ಮುಂದುವರಿದ ಹೃದಾಯಾಘಾತ ಸಾವಿನ ಸರಣಿ

**ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್**



ಹಾಸನ: ಜಿಲ್ಲೆಯಲ್ಲಿ ಹೃದಯಾಘಾತದಿಂದ ದಿಢೀರ್ ಸಾವು ಪ್ರಕರಣ ಮುಂದುವರಿದಿದ್ದು ಸೋಮವಾರ ನಾಲ್ವರು ಮೃತಪಟ್ಟಿರುವ ವರದಿಯಾಗಿದೆ.

ಚನ್ನರಾಯಪಟ್ಟಣ ತಾಲ್ಲೂಕಿನ ಹಿರೀಸಾವೆ ಹೋಬಳಿ ಜಿನ್ನೇನಹಳ್ಳಿ ಗ್ರಾಮದ ಜಯಣ್ಣ (67) ಮೃತಪಟ್ಟಿದ್ದಾರೆ. ಕೆಲಸದ ನಿಮಿತ್ತ ಹಿರೀಸಾವೆಗೆ ತೆರಳಿದ್ದ ಅವರು ರಾತ್ರಿ ಹೋಟೆಲ್‌ವೊಂದರಲ್ಲಿ ಊಟ ಮಾಡಿ ಮನೆಗೆ ಬಂದಿದ್ದರು. ಬೆಳಕಾದರೂ ಬಾಗಿಲು ತೆರೆಯದ ಹಿನ್ನೆಲೆಯಲ್ಲಿ ಅಕ್ಕಪಕ್ಕದ ಮನೆಯವರು ಬಾಗಿಲು ಒಡೆದು ನೋಡಿದಾಗ ಮೃತಪಟ್ಟಿರುವುದು ತಿಳಿದಿದೆ.

ಮೃತ ಜಯಣ್ಣ ಅವರಿಗೆ ನಾಲ್ವರು ಪುತ್ರಿಯರಿದ್ದಾರೆ. ಮೊದಲನೇ ಮಗಳ ಪತಿ ತೀರಿಕೊಂಡಿದ್ದರಿಂದ ಜಯಣ್ಣ ಅವರ ಪತ್ನಿ ಜಾನಕಮ್ಮ ಮಗಳ ಮನೆಯಲ್ಲಿ ಉಳಿದುಕೊಂಡಿದ್ದರು. ಜಯಣ್ಣ ಒಬ್ಬರೇ ಜಿನ್ನೇನಹಳ್ಳಿಯ ಮನೆಯಲ್ಲಿದ್ದರು.

ಜಯಣ್ಣ ಅವರಿಗೆ ಆರೋಗ್ಯದ ಮೇಲೆ ಅಧಿಕ ಕಾಳಜಿ ಇತ್ತು. ನಿಯಮಿತವಾಗಿ ಆರೋಗ್ಯ ತಪಾಸಣೆ ಮಾಡಿಸಿಕೊಳ್ಳುತ್ತಿದ್ದರು. ಯಾವ ಸಮಸ್ಯೆಯೂ ಇರಲಿಲ್ಲ ಎನ್ನಲಾಗಿದೆ. ಸೋಮವಾರ ಅಂತ್ಯಕ್ರಿಯೆ ನೆರವೇರಿಸಲಾಯಿತು.

ಸಕಲೇಶಪುರ ತಾಲ್ಲೂಕಿನ ಬೆಳಗೋಡು ಹೋಬಳಿ ಮೆಣಸಮಕ್ಕಿ ಗ್ರಾಮದ ಲಕ್ಷ್ಮಣ್ (52) ಎಂಬುವವರು ಮೃತಪಟ್ಟಿದ್ದಾರೆ. ಭಾನುವಾರ ಸಂಜೆ ಕೆಲಸ ಮುಗಿಸಿ ಮನೆಗೆ ಬರುತ್ತಿದ್ದಂತೆ ಎದೆನೋವು ಕಾಣಿಸಿಕೊಂಡಿದೆ. ಭಯ ಭೀತರಾದ ಕುಟುಂಬಸ್ಥರು ಅಂಬುಲೆನ್ಸ್‌ಗೆ ಕರೆ ಮಾಡಿದ್ದಾರೆ. ವಾಹನ ಮನೆ ಬಾಗಿಲಿಗೆ ಬರುವಷ್ಟರಲ್ಲಿ ಲಕ್ಷ್ಮಣ್ ಪ್ರಾಣಬಿಟ್ಟಿದ್ದರು.

ಮತ್ತೊಂದು ಪ್ರಕರಣದಲ್ಲಿ ಹಾಸನದ ಅಮೀರ್ ಮೊಹಲ್ಲಾ ನಿವಾಸಿ ಮುಹೀತ್ (53) ಸಾವನ್ನಪ್ಪಿದ್ದಾರೆ. ಮನೆಯಲ್ಲಿದ್ದಾಗ ಎದೆ ನೋವು ಕಾಣಿಸಿಕೊಂಡಿದ್ದರಿಂದ ಸಂಬಂಧಿಕರು ಆಸ್ಪತ್ರೆಗೆ ಕರೆತರುತ್ತಿದ್ದಾಗ ಮಾರ್ಗಮಧ್ಯೆಯೇ ನೋವು ಹೆಚ್ಚಾಗಿ ಮೃತಪಟ್ಟಿದ್ದಾರೆ.

ಮತ್ತೊಂದು ಪ್ರಕರಣದಲ್ಲಿ ಅರಸೀಕೆರೆ ತಾಲ್ಲೂಕಿನ ಬೆಳಗುಂಬ ಗ್ರಾಮದ ಸುರೇಶ್ (52) ಎಂಬುವವರು ಅಸುನೀಗಿದ್ದಾರೆ. ಬೆಳಿಗ್ಗೆ 5 ಗಂಟೆಗೆ ಎದೆನೋವು ಎಂದಾಗ ತಾಲ್ಲೂಕು ಆಸ್ಪತ್ರೆಗೆ ದಾಖಲಿಸಿದ್ದರು ಚಿಕಿತ್ಸೆಗೆ ಸ್ಪಂದಿಸದೆ ಮೃತಪಟ್ಟಿದ್ದಾರೆ.

## ಸಂಭ್ರಮದ ಲಕ್ಷ್ಮಿ ವೆಂಕಟರಮಣ ಸ್ವಾಮಿ ರಥೋತ್ಸವ



**ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್**

ಅರಸೀಕೆರೆ: ತಾಲ್ಲೂಕಿನ ಸುಕ್ಷೇತ್ರ ಅಮರಗಿರಿ ಮಾಲೇಕಲ್ ತಿರುಪತಿ ಶ್ರೀ ಲಕ್ಷ್ಮೀ ವೆಂಕಟರಮಣ ಸ್ವಾಮಿ ರಥೋತ್ಸವ ಆಷಾಢ ದ್ವಾದಶಿ ಸೋಮವಾರ ವಿಜೃಂಭಣೆಯಿಂದ ನೆರವೇರಿತು. ಮುಂಜಾನೆಯಿಂದಲೇ ದೇಗುಲದಲ್ಲಿ ಪೂಜಾ ಕೈಂಕರ್ಯಗಳು ನಿರ್ವಿಘ್ನವಾಗಿ ಜರುಗಿದವು. ಬೆಟ್ಟದ ತಪ್ಪಲಿನ ಶ್ರೀ ಲಕ್ಷ್ಮೀ ವೆಂಕಟರಮಣ ಸ್ವಾಮಿ ಹಾಗೂ ಬೆಟ್ಟದ ಮೇಲಿನ ಗೋವಿಂದರಾಜ ಸ್ವಾಮಿಗೆ ಭಕ್ತರು ಸರತಿ ಸಾಲಿನಲ್ಲಿ ನಿಂತು ದೇವರ ದರ್ಶನ ಪಡೆದರು.

ಸರ್ವಾಲಂಕೃತ ಉತ್ತಮ ಮೂರ್ತಿಯನ್ನು ರಥ ಮಂಟಪಕ್ಕೆ ಕರೆತಂದು ಪ್ರತಿಷ್ಠಾಪಿಸಿ ಮಹಾಮಂಗಳಾರತಿ ಮಾಡಿದ ಬಳಿಕ ಜಯಘೋಷದೊಂದಿಗೆ ರಥೋತ್ಸವಕ್ಕೆ ಚಾಲನೆ ನೀಡಲಾಯಿತು. ಅಪಾರ ಸಂಖ್ಯೆಯಲ್ಲಿ ಪಾಲ್ಗೊಂಡಿದ್ದ ಭಕ್ತರು ಬಾಳೆ ಹಣ್ಣು, ದವನ ಎಸೆದು ಭಕ್ತಿ ಸಮರ್ಪಿಸಿದರು.

ಶಾಸಕ ಕೆ.ಎಂ.ಶಿವಲಿಂಗೇಗೌಡ, ತಹಶೀಲ್ದಾರ್ ಎಂ.ಜಿ. ಸಂತೋಷ್ ಕುಮಾರ್, ಗ್ರೇಡ್ 2 ತಹಶೀಲ್ದಾರ್ ಪಾಲಾಕ್ಷ, ನಗರ ಯೋಜನಾ ಪ್ರಾಧಿಕಾರ ಅಧ್ಯಕ್ಷ ಅರುಣ್ ಕುಮಾರ್ ಇತರರಿದ್ದರು.

## ಬೆಳೆ ನಷ್ಟ ಪರಿಹಾರಕ್ಕೆ ಆಗ್ರಹಿಸಿ ರೈತ ಸಂಘ ಪ್ರತಿಭಟನೆ

**ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್**



ಹಾಸನ: ಸರ್ಕಾರ ಕಂಪನಿಗಳ ಮೂಲಕ ರೈತರಿಗೆ ಕಳಪೆ ಗುಣಮಟ್ಟದ ಜೋಳದ ಬೀಜ ನೀಡಲಾಗಿದ್ದು, ಬೆಳೆಗೆ ಆಗಿರುವ ನಷ್ಟದ ಬಗ್ಗೆ ಪರಿಹಾರ ನೀಡಲು ಆಗ್ರಹಿಸಿ ನಕಲಿ ಕಂಪನಿಗಳ ಪ್ರತಿಕೃತಿ ದಹಿಸಿ ಜಂಟಿ ಕೃಷಿ ನಿರ್ದೇಶಕರ ಕಚೇರಿಗೆ ಮುತ್ತಿಗೆ ಹಾಕಿ ರೈತ ಸಂಘದಿಂದ ಸೋಮವಾರ ಪ್ರತಿಭಟನೆ ನಡೆಸಲಾಯಿತು.

ನಗರದ ಹೇಮಾವತಿ ಪ್ರತಿಮೆ ಬಳಿಯಿಂದ ನಕಲಿ ಕಂಪನಿಗಳ ಪ್ರತಿಕೃತಿಯನ್ನು ಹೆಗಲು ಮೇಲೆ ಹೊತ್ತು ಹೊರಟ ಪ್ರತಿಭಟನಾ ಮೆರವಣಿಗೆ ಎನ್. ಆರ್. ವೃತ್ತ, ಬಿ.ಎಂ. ರಸ್ತೆ ಮೂಲಕ ಸಂತೆಪೇಟೆ ವೃತ್ತ ತಲುಪಿತು.


ರಾಜ್ಯ ರೈತ ಸಂಘದ ಮುಖಂಡ ಗಂಗಾಧರ್ ಮಾತನಾಡಿ, ಉತ್ತಮ ಮಳೆಯಾಗಿ ಜೂನ್‌ನಲ್ಲೇ ಜಲಾಶಯಗಳು ಭರ್ತಿಯಾಗಿವೆ. ರಾಜ್ಯದಲ್ಲಿ ಉತ್ತಮ ಬಿತ್ತನೆಯಾಗಿದೆ. ಆದರೆ ಕೃಷಿ ಮತ್ತು ತೋಟಗಾರಿಕ ಇಲಾಖೆ ಬೀಜ ಸಂಬಂಧಿತ ಕಾಯಿದೆ ಪರಿಪಾಲನೆ ಮಾಡುವಲ್ಲಿ ಸೋತಿದೆ. ಅಧಿಕೃತವಾಗಿ ಸರ್ಕಾರದ ಬಿಡ್ಡಿಗೆ ಮತ್ತು ಕೃಷಿ ಇಲಾಖೆಗೆ ಸರಬರಾಜು ಮಾಡದೆ ಇರುವ ಕಂಪನಿಗಳ ಜೊತೆ ಕೃಷಿ ನಿರ್ದೇಶಕರು ಶಾಮಿಲಾಗಿ ರೈತರಿಗೆ ಕಳಪೆ ಬೀಜ ನೀಡಿರುವ ಮತ್ತು ಕಂಪನಿಯವರು ರೈತರಿಗೆ ಜಂಟಿ ಕೃಷಿ ನಿರ್ದೇಶಕರ ನೇತೃತ್ವದಲ್ಲಿ ನಷ್ಟ ತುಂಬಿಕೊಡಬೇಕು ಎಂದರು.

ಸಾಮೂಹಿಕವಾಗಿ ರೈತರಿಗೆ ಜಿಲ್ಲಾಡಳಿತದಿಂದ ಉಚಿತವಾಗಿ ಬೆಳೆ ವಿಮೆ ಮಾಡಿಕೊಡಬೇಕು. ಕಳಪೆ ಬೀಜವನ್ನು ಕೃಷಿ ಇಲಾಖೆಯವರ ಹೆಸರು ಬಳಸಿಕೊಂಡು ಪ್ರಚಾರದಲ್ಲಿ ತೊಡಗಿರುವರ ವಿರುದ್ಧ ಮೊಕದ್ದಮೆ ದಾಖಲಿಸಿ ಮತ್ತು ಕೃಷಿ ಇಲಾಖೆಗೆ ಸರಬರಾಜು ಮಾಡದೆ ಇರುವ ಕಂಪನಿಯವರನ್ನು ಅಂಗಡಿ ಮೂಲಕ ಮಾರುವುದನ್ನು ನಿರ್ಬಂಧಿಸಬೇಕು. ಬೆಳೆ ಸಮೀಕ್ಷೆಯನ್ನು ತಾಲ್ಲೂಕು ಆಡಳಿತ ಅಧಿಕಾರಿಗಳು ಮತ್ತು ಕೃಷಿ ಇಲಾಖೆ ಅಧಿಕಾರಿಗಳು ಜೊತೆಗೂಡಿ ಹಾಗೂ ತೋಟಗಾರಿಕೆ ಇಲಾಖೆ ಅಧಿಕಾರಿಗಳ ಸಮ್ಮುಖದಲ್ಲಿ ಪ್ರತಿ ಹಳ್ಳಿಗಳಲ್ಲಿಯೂ ಸಮೀಕ್ಷೆ ನಡೆಸಿ ಜಿಲ್ಲಾಡಳಿತಕ್ಕೆ ವರದಿ ನೀಡಬೇಕು ಎಂದು ಒತ್ತಾಯಿಸಿದರು.

ಬೆಳೆ ನಾಶವಾಗಿರುವ ರೈತರಿಗೆ ಕಂಪನಿಯವರಿಂದಲೆ ಕೃಷಿ ಇಲಾಖೆ ಪ್ರತಿ ಎಕರೆಗೆ 50 ಸಾವಿರ ರೂ. ಪರಿಹಾರ ಕೊಡಿಸಬೇಕು. ಜಿಲ್ಲಾ ಕೃಷಿ ಇಲಾಖೆ ಜಂಟಿ ನಿರ್ದೇಶಕರ ಹೆಸರನ್ನು ಅನುಮತಿ ಇಲ್ಲದೆ ಬಳಸಿಕೊಂಡು ಕರಪತ್ರ ಮುದ್ರಿಸಿ ಇಲಾಖೆ ದುರುಪಯೋಗ ಪಡಿಸಿಕೊಂಡಿರುವ ಬಿತ್ತನೆ ಬೀಜದ ಹೈಟೆಕ್ ಕಂಪನಿ ಮತ್ತು ಏಜೆನ್ಸಿ ವಿರುದ್ಧ ಸೂಕ್ತ ಕ್ರಮಕೈಗೊಳ್ಳಬೇಕು ಎಂದು ಆಗ್ರಹಿಸಿದರು.

ಸಂಘದ ಅಧ್ಯಕ್ಷೀಯ ಮಂಡಳಿ ಸದಸ್ಯ ಮುಖಂಡರಾದ ಚುಕ್ಕಿ ನಂಜುಂಡಸ್ವಾಮಿ, ತಿಪಟೂರು ಜಯಚಂದ್ರ ಶರ್ಮ, ಮೈಸೂರಿನ ಕಿರಣ್, ರೈತ ಸಂಘದ ಜಿಲ್ಲಾಧ್ಯಕ್ಷ ಮೂರ್ತಿ ಕಣಗಾಲ್, ಗ್ಯಾರಂಟಿ ರಾಮಣ್ಣ, ಮಂಜು ಬಿಟ್ಟಗೌಡನಹಳ್ಳಿ ರೈತ ಸಂಘದ ಜಿಲ್ಲಾ ಕಾರ್ಯದರ್ಶಿ ಮರ್ಕುಲಿ ಪ್ರಕಾಶ್, ತಾಲ್ಲೂಕು ಅಧ್ಯಕ್ಷ ಬಿಟ್ಟಗೌಡನಹಳ್ಳಿ ಮಂಜುನಾಥ್, ಪಾಲಾಕ್ಷ ಮಾರನಹಳ್ಳಿ, ಶಿವಕುಮಾರ್ ಹಳೇಬೀಡು, ಶೇಷಣ್ಣ, ಕಾಂತರಾಜು ಇತರರಿದ್ದರು.

## ಕಾರ್ಮಿಕ ಕಾನೂನು ತಿದ್ದುಪಡಿ ವಿರೋಧಿಸಿ ಜು. 9ಕ್ಕೆ ಪ್ರತಿಭಟನೆ




ಹಾಸನ: ಕಾರ್ಮಿಕ ಕಾನೂನು ತಿದ್ದುಪಡಿ ವಿರೋಧಿಸಿ ಹಾಗು ದುಡಿಯುವ ವರ್ಗಕ್ಕೆ ಸೂಕ್ತ ಸೌಲಭ್ಯಕ್ಕೆ ಆಗ್ರಹಿಸಿ ಜು. 9 ರಂದು ಸಾರ್ವತ್ರಿಕ ಮುಷ್ಕರ ಹಮ್ಮಿಕೊಳ್ಳಲಾಗಿದೆ ಎಂದು ಸಿಐಟಿಯು ಜಿಲ್ಲಾಧ್ಯಕ್ಷ ಧರ್ಮೇಶ್ ಹೇಳಿದರು.

ಸುದ್ದಿಗೋಷ್ಟಿಯಲ್ಲಿ ಸೋಮವಾರ ಮಾತನಾಡಿ, ಅಭಿವೃದ್ಧಿ ಹೆಸರಿನಲ್ಲಿ ಕಾರ್ಪೊರೇಟ್ ಕಂಪನಿಗಳ ಸೇವಕರನ್ನಾಗಿ ಮಾಡಲು ವೇತನ ಸಂಹಿತೆ, ಕೈಗಾರಿಕಾ ಬಾಂಧವ್ಯ ಸಂಹಿತೆ, ಔದ್ಯೋಗಿಕ ಸುರಕ್ಷತೆ, ಆರೋಗ್ಯ ಮತ್ತು ಕೆಲಸದ ಪರಿಸ್ಥಿತಿಗಳ ಸಂಹಿತೆ ಸೇರಿ 29 ಕಾನೂನುಗಳನ್ನು 4 ಸಂಹಿತೆಗಳಲ್ಲಿ ರೂಪಿಸಲಾಗಿದೆ. ಕೇಂದ್ರ ಸರ್ಕಾರದ ಅವೈಜ್ಞಾನಿಕ ನೀತಿಯಿಂದ ದುಡಿಯುವ ವರ್ಗವು ಸಂಕಷ್ಟಕ್ಕೆ ಸಿಲುಕಿದೆ ಎಂದರು.

ಕಾರ್ಮಿಕರ ಕೆಲಸದ ಅವಧಿಯನ್ನು 8 ರಿಂದ 12 ಗಂಟೆಗೆ ಹೆಚ್ಚಿಸಲು ಓವರ್ ಟೈಮ್ ಅನ್ನು 3 ತಿಂಗಳಿಗೆ 50 ಗಂಟೆ ಇದ್ದುದ್ದು ಈಗ 125 ಗಂಟೆಗೆ ಹೆಚ್ಚಿಸಲು ಅನುಮತಿ ನೀಡಲು ಸರ್ಕಾರ ಮುಂದಾಗಿದೆ. ಅದರಿಂದ ಕಾರ್ಮಿಕರ ಆರೋಗ್ಯದ ಮೇಲೆ ದುಷ್ಪರಿಣಾಮ ಬೀರುತ್ತದೆ. ಕಾರ್ಮಿಕರು ಮಾಡುವ ಮುಷ್ಕರವನ್ನು ಸಂಘಟಿತ ಅಪರಾಧ ಎನ್ನುವ ಸರ್ಕಾರದ ಧೋರಣೆ ಸರಿಯಲ್ಲವೆಂದರು.

ಪ್ರತಿಭಟನೆ ಅಂಗವಾಗಿ ತಾಲ್ಲೂಕು ಕೇಂದ್ರಗಳಲ್ಲಿ ಮೆರವಣಿಗೆ ಮತ್ತು ರಸ್ತೆ ತಡೆ ನಡೆಸಲಾಗುವುದು. ಸರ್ಕಾರ ನ್ಯಾಯಯುತ ಬೇಡಿಕೆ ಈಡೇರಿಕೆಗೆ ಕ್ರಮ ವಹಿಸದಿದ್ದರೆ ಮುಂದಿನ ದಿನಗಳಲ್ಲಿ ಹೋರಾಟ ತೀವ್ರಗೊಳಿಸಲಾಗುವುದು ಎಂದು ಎಚ್ಚರಿಕೆ ನೀಡಿದರು.

# ಸ್ವಾಭಿಮಾನದ ಬದುಕಿಗೆ ಶಿಕ್ಷಣ ಮುಖ್ಯ : ಸಚಿವ ರಾಜಣ್ಣ

ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್



ಚನ್ನರಾಯಪಟ್ಟಣ: ಮಕ್ಕಳು ವಿದ್ಯಾಭ್ಯಾಸಕ್ಕೆ ಒತ್ತು ನೀಡಿ, ಉತ್ತಮ ಭವಿಷ್ಯ ರೂಪಿಸಿಕೊಳ್ಳುವ ಮೂಲಕ ದೇಶದ ಆಸ್ತಿಯಾಗಿ ಬೆಳೆಯಬೇಕೆಂದು ಜಿಲ್ಲಾ ಉಸ್ತುವಾರಿ ಸಚಿವ ಕೆ.ಎನ್. ರಾಜಣ್ಣ ಸಲಹೆ ನೀಡಿದರು.

ತಾಲ್ಲೂಕಿನ ನುಗ್ಗೇಹಳ್ಳಿ ಹೋಬಳಿ ಗೂಳಿಹೊನ್ನೆನಹಳ್ಳಿಯಲ್ಲಿ ಭಾನುವಾರ ಮುರಾರ್ಜಿ ದೇಸಾಯಿ ವಸತಿ ಶಾಲಾ ಕಟ್ಟಡ ಉದ್ಘಾಟಿಸಿ ಮಾತನಾಡಿದ ಅವರು, ನೂರಕ್ಕೆ ನೂರರಷ್ಟು ಫಲಿತಾಂಶ ಪಡೆಯುವ ನಿಟ್ಟಿನಲ್ಲಿ ಬೋಧಕರು ಶ್ರಮವಹಿಸಿ ಮಕ್ಕಳಿಗೆ ನಿರಂತರವಾಗಿ ಕಲಿಸುವುದರ ಜೊತೆಗೆ ಮಕ್ಕಳು ಶಾಲೆಗೆ ಗೈರು ಹಾಜರಾಗದಂತೆ ನೋಡಿಕೊಳ್ಳಬೇಕೆಂದರು.

ವಿದ್ಯಾದಾನ ಅತ್ಯಂತ ಶ್ರೇಷ್ಠವಾದುದು. ಅದಕ್ಕೆ ಸರಿಸಾಟಿ ಯಾವುದಿಲ್ಲ. ಈ ನಿಟ್ಟಿನಲ್ಲಿ ಬೋಧಕರು ಈ ಶಾಲೆಯಲ್ಲಿ ಕಲಿಯುವ ಮಕ್ಕಳು ತಮ್ಮ ಮಕ್ಕಳು ಎಂಬ ಮನೋಭಾವನೆಯಿಂದ ಮುತುವರ್ಜಿ ವಹಿಸಿ ಪಠ್ಯ ಬೋಧನೆ ಮಾಡಬೇಕೆಂದರು.

ವಿದ್ಯೆ ಸಾಧಕರ ಸ್ವತ್ತು, ಮಕ್ಕಳು ಶ್ರದ್ಧೆಯಿಂದ ಕಲಿತು ಶಾಲೆಗೆ, ಬೋಧಕರಿಗೆ ಹಾಗೂ ಪೋಷಕರಿಗೆ ಕೀರ್ತಿ ತರಬೇಕು. ಸರ್ಕಾರಿ ಶಾಲೆಗಳಲ್ಲಿ ಮಕ್ಕಳಿಗೆ ಉಚಿತ ಶಿಕ್ಷಣ ಒದಗಿಸುವ ನಿಟ್ಟಿನಲ್ಲಿ ಪಠ್ಯ ಪುಸ್ತಕ, ಸಮವಸ್ತ್ರ, ಶೂ, ಬಿಸಿಯೂಟ ನೀಡಲಾಗುತ್ತದೆ. ಅದರ ಸದುಪಯೋಗವನ್ನು ಎಲ್ಲಾ ಮಕ್ಕಳು ಪಡೆಯಬೇಕು. ಸುಸಜ್ಜಿತ ವಸತಿ ಶಾಲಾ ಕಟ್ಟಡ ಉದ್ಘಾಟಿಸಲು ಅವಕಾಶ ದೊರೆತಿರುವುದು ನನ್ನ ಸುದೈವ. ಈ ಶಾಲೆಯಲ್ಲಿ ಕಲಿಯುವ ಬಹುತೇಕ ಮಕ್ಕಳು ಹಳ್ಳಿಗಾಡಿನ ಪ್ರದೇಶಗಳಿಂದ ಬಂದಿರುತ್ತಾರೆ. ಈ ಮಕ್ಕಳ ಪ್ರತಿಭೆ ಯಾವುದೇ ಪಟ್ಟಣದ ಮಕ್ಕಳಿಗಿಂತ ಕಡಿಮೆ ಇರುವುದಿಲ್ಲ, ಸಮಾನವಾದ ಬುದ್ಧಿಶಕ್ತಿ ಇರುತ್ತದೆ. ಶ್ರದ್ಧೆಯಿಂದ ಅಭ್ಯಾಸ ಮಾಡಿದರೆ ಸರಸ್ವತಿ ಒಲಿಯುತ್ತಾಳೆ. ಈ ನಿಟ್ಟಿನಲ್ಲಿ ಗುಣಮಟ್ಟದ ಶಿಕ್ಷಣ ಪಡೆದು ತಮ್ಮಲ್ಲಿರುವ ಪ್ರತಿಭೆಯನ್ನು ಅರಿತು ವೇದಿಕೆ ಸೃಷ್ಟಿಸಿಕೊಳ್ಳಬೇಕೆಂದು ಕಿವಿಮಾತು ಹೇಳಿದರು.

ಗುಣಮಟ್ಟದ ಶಿಕ್ಷಣ ಒದಗಿಸುವ ನಿಟ್ಟಿನಲ್ಲಿ ಈ ರೀತಿಯ ವಸತಿ ಶಾಲೆಗಳನ್ನು ಕಾರ್ಮಿಕ ಇಲಾಖೆ ಮೂಲಕ ತೆರೆಯಲು ಇತ್ತೀಚೆಗೆ ನಂದಿಬೆಟ್ಟದಲ್ಲಿ ನಡೆದ ಸಚಿವ ಸಂಪುಟದ ಸಭೆಯಲ್ಲಿ ತೀರ್ಮಾನಿಸಲಾಗಿದೆ ಎಂದು ತಿಳಿಸಿದರು.

ಜನಸಂಖ್ಯೆ ಹೆಚ್ಚುತ್ತಿದೆ ಹೊರತು ಭೂಮಿ ವಿಸ್ತಾರ ಅಷ್ಟೇ ಇದೆ. ಭೂಮಿ ನಂಬಿ ಜೀವನ ನಡೆಸುತ್ತಿರುವ ರೈತರು ಕೃಷಿಗೆ ತೊಡಗಿಸುವ ಬಂಡವಾಳ ಸಹ ವಾಪಾಸು ಬರುತ್ತಿಲ್ಲ. ರೈತರು ಬೆಳೆಯುವ ಬೆಳೆಗೆ ನಿರೀಕ್ಷಿತ ಬೆಲೆ ದೊರೆಯುತ್ತಿಲ್ಲ. ಕೃಷಿ ಉತ್ಪನ್ನ ಕೊಳ್ಳುವವರು ಬೆಲೆ ನಿರ್ಧಾರ ಮಾಡುತ್ತಾರೆ. ನ್ಯಾಯಯುತ ಬೆಲೆ ದೊರೆಯದೆ ಆರ್ಥಿಕ ಸಂಕಷ್ಟಕ್ಕೆ ಸಿಲುಕಿ ತೊಂದರೆ ಅನುಭವಿಸುತ್ತಾರೆ. ಈ ಎಲ್ಲಾ ಸಮಸ್ಯೆಗಳಿಂದ ಮುಕ್ತರಾಗಬೇಕೆಂದರೆ ವಿದ್ಯಾವಂತರಾಗಬೇಕು. ಆರ್ಥಿಕ ಸ್ವಾವಲಂಬಿಗಳಾಗಬೇಕಾದರೆ ಒಳ್ಳೆಯ ಉದ್ಯೋಗ ಪಡೆಯಬೇಕು. ಅದಕ್ಕಾಗಿ ವ್ಯಾಸಂಗ ಮುಖ್ಯವಾಗುತ್ತದೆಂದರು.

ಸಂಸದ ಶ್ರೇಯಸ್ ಪಟೇಲ್ ಮಾತನಾಡಿ, ಸರ್ಕಾರ ವಸತಿ ಶಾಲೆಗಳಿಗೆ ಉತ್ತಮ ಸೌಲಭ್ಯಗಳನ್ನು ನೀಡುವುದರ ಜೊತೆಗೆ ಮೌಲ್ಯಯುತ ಶಿಕ್ಷಣ ಕಲ್ಪಿಸುತ್ತದೆ. ಮಕ್ಕಳು ಅದರ ಸದುಪಯೋಗ ಪಡಿಸಿಕೊಳ್ಳಲು ತಿಳಿಸಿದರು.

ಅಧ್ಯಕ್ಷತೆ ವಹಿಸಿದ್ದ ಶಾಸಕ ಸಿ.ಎನ್. ಬಾಲಕೃಷ್ಣ ಮಾತನಾಡಿ, ಸದರಿ ವಸತಿ ಶಾಲೆಗೆ ಮೂಲಸೌಕರ್ಯ ಹಾಗೂ ಇನ್ನಿತರ ಕಾಮಗಾರಿಗೆ 1.50 ಕೋಟಿ ರೂ. ಅನುದಾನ ಒದಗಿಸುವಂತೆ ಜೊತೆಗೆ ಚನ್ನರಾಯಪಟ್ಟಣ ತಾಲ್ಲೂಕಿಗೆ ಇನ್ನೂ ಎರಡು ಮುರಾರ್ಜಿ ದೇಸಾಯಿ ವಸತಿ ಶಾಲೆ ನೀಡುವಂತೆ ಸಚಿವರಿಗೆ ಮನವಿ ಮಾಡಿದರು.

ಜಿಲ್ಲಾಧಿಕಾರಿ ಕೆ.ಎಸ್. ಲತಾಕುಮಾರಿ, ಜಿಲ್ಲಾ ಪಂಚಾಯಿತಿ ಮುಖ್ಯಕಾರ್ಯನಿರ್ವಹಣಾಧಿಕಾರಿ ಬಿ.ಆರ್. ಪೂರ್ಣಿಮಾ, ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಮೊಹಮ್ಮದ್ ಸುಜೀತ, ವಿಧಾನ ಪರಿಷತ್ ಮಾಜಿ ಸದಸ್ಯ ಎಂ.ಎ. ಗೋಪಾಲಸ್ವಾಮಿ, ಅಪರ ಜಿಲ್ಲಾಧಿಕಾರಿ ಕೆ.ಟಿ. ಶಾಂತಲಾ, ಕರ್ನಾಟಕ ವಸತಿ ಶಿಕ್ಷಣ ಇಲಾಖೆ ಸೂಪರಿಂಟೆಂಡೆಂಟ್ ಇಂಜಿನಿಯರ್ ಜನಾರ್ದನ, ಉಪ ವಿಭಾಗಾಧಿಕಾರಿ ಮಾರುತಿ, ಗ್ರಾಮ ಪಂಚಾಯಿತಿ ಅಧ್ಯಕ್ಷೆ ಚಂದ್ರಕಲಾ, ಉಪಾಧ್ಯಕ್ಷ ಅಶೋಕ್ ಮತ್ತಿತರರಿದ್ದರು.

# ಹಾಸನದಲ್ಲಿ ಮಾಜಿ ಉಪ ಪ್ರಧಾನಿ ಬಾಬುಜಿ ಸ್ಮರಣೆ



ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್


ಹಾಸನ: ಹಸಿರುಕ್ರಾಂತಿ ಹರಿಕಾರ ಮಾಜಿ ಉಪ ಪ್ರಧಾನಿ ಡಾ. ಬಾಬು ಜಗಜೀವನ್ ರಾಮ್ ಅವರ 39ನೇ ಪುಣ್ಯ ಸ್ಮರಣೆಯನ್ನು ನಗರದ ವಿವೇಕ ನಗರದಲ್ಲಿ ಜಿಲ್ಲಾ ಬಾಬು ಜಗಜೀವನ್ ರಾಮ್ ಕ್ಷೇಮಾಭಿವೃದ್ಧಿ ಸಂಘದಿಂದ ಸ್ಮರಿಸಲಾಯಿತು.

ಸಂಘದ ಅಧ್ಯಕ್ಷ ಬಸವರಾಜು ಮಾತನಾಡಿ, ಸರ್ವ ವರ್ಗದ ಅಭಿವೃದ್ಧಿಗೆ ಅಂಬೇಡ್ಕರ್ ಅವರಂತೆ ಶ್ರಮಿಸಿದ ಡಾ. ಬಾಬು ಜಗಜೀವನ್ ರಾಮ್ ಅವರ ಜೀವನದ ಆದರ್ಶಗಳನ್ನು ಪ್ರತಿಯೊಬ್ಬರೂ ಅಳವಡಿಸಿಕೊಳ್ಳುವ ಮೂಲಕ ಸಮಾಜದಲ್ಲಿ ಹಿಂದುಳಿದವರ, ಶ್ರಮಿಕರ ಹಾಗೂ ವಿದ್ಯಾರ್ಥಿಗಳ ಏಳಿಗೆಗೆ ಶ್ರಮಿಸಬೇಕಾದ ಅಗತ್ಯವಿದೆ ಎಂದು ಅಭಿಪ್ರಾಯಪಟ್ಟರು.

ಎಲ್ಲಾ ಜಾತಿಯ ಬಡವರ ಉದ್ಧಾರವಾಗುವವರೆಗೆ ದೇಶದ ಅಭಿವೃದ್ಧಿ ಸಾಧ್ಯವಿಲ್ಲ. ದೇಶದ ರೈತರು ಆಧುನಿಕ ಬೇಸಾಯ ಪದ್ಧತಿ ಅಳವಡಿಸಿಕೊಳ್ಳುವವರೆಗೆ ದೇಶದಲ್ಲಿ ರೈತರ ಅಭಿವೃದ್ಧಿಯಾಗಲ್ಲ ಎಂದು ಹೇಳುತ್ತಿದ್ದ ಸಂದರ್ಭದಲ್ಲಿ ಜಗಜೀವನ ರಾಮ್ ಅವರು ದೇಶದ ಕೃಷಿ ಸಚಿವರಾಗಿ ಕ್ರಾಂತಿಯನ್ನೇ ಸೃಷ್ಟಿಸಿದ ವ್ಯಕ್ತಿ. ಅವರ ಅವಧಿಯಲ್ಲಿ ಆಧುನಿಕ ಬೇಸಾಯ ಪದ್ಧತಿ ಅಳವಡಿಸಲಾಯಿತು.

# ಭಾರತೀಯ ಸಾಹಿತ್ಯದಲ್ಲಿ ಭಾವಕ್ಕೆ ಪ್ರಾಧ್ಯಾನತೆ

## ಅಕ್ಷರ ಬುಕ್ ಮಾತು ಸಂವಾದದಲ್ಲಿ ಸೇತುರಾಮ್ ಪ್ರತಿಪಾದನೆ | ಸಾಹಿತ್ಯಾಸಕ್ತರ ಸಮಾಗಮ




ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್

ಹಾಸನ: ಪಾಶ್ಚಿಮಾತ್ಯ ಸಾಹಿತ್ಯದಲ್ಲಿ ತರ್ಕಕ್ಕೆ ಪ್ರಾಧ್ಯಾನತೆ ಕೊಟ್ಟಿದ್ದರೆ ಭಾರತೀಯ ಸಾಹಿತ್ಯ ಭಾವವನ್ನು ಪ್ರತಿನಿಧಿಸುತ್ತದೆ. ಈ ಕಾರಣಕ್ಕೆ ನಮ್ಮ ಸಂಸ್ಕೃತಿ ಕುರಿತು ಅಪಹಾಸ್ಯ ಮಾಡುವುದು ಸರಿಯಲ್ಲವೆಂದು ನಾಟಕಕಾರ ಎಸ್.ಎನ್. ಸೇತುರಾಮ್ ಹೇಳಿದರು.

ನಗರದ ಎಂ.ಜಿ. ರಸ್ತೆಯಲ್ಲಿರುವ ಗಾಂಧಿ ಭವನದಲ್ಲಿ ಭಾನುವಾರ ಅಕ್ಷರ ಬುಕ್ ಹೌಸ್‌ನಿಂದ ಆಯೋಜಿಸಿದ್ದ ಬುಕ್ ಮಾತು ಕಾರ್ಯಕ್ರಮದಲ್ಲಿ ಮಾತನಾಡಿ, ನಮ್ಮ ಸಾಹಿತ್ಯದಲ್ಲಿ ವೇದ ಉಪನಿಷತ್ತುಗಳನ್ನು ಹೆಚ್ಚಾಗಿ ಬಳಸಿಕೊಳ್ಳಲಾಗುತ್ತದೆ. ಅದರಿಂದ ಭಾರತೀಯರ ಬೌದ್ಧಿಕ ಮಟ್ಟ ಕೆಳಮಟ್ಟದಲ್ಲಿದೆ ಎನ್ನುವುದೆಲ್ಲ ಸುಳ್ಳು. ವೇದ ಉಪನಿಷತ್ತುಗಳನ್ನು ಓದದವರು ಸಹ ಮೂಲ ಸಂಸ್ಕೃತಿ ಅಳವಡಿಸಿಕೊಂಡಿದ್ದಾರೆ. ಭಾರತೀಯರು ಭಾವ ಜೀವಿಗಳು. ಅದನ್ನು ತಪ್ಪೆಂದು ಭಾವಿಸುವುದು ಸರಿಯಲ್ಲ. ಕನ್ನಡದಲ್ಲೂ ಒಳ್ಳೆಯ ಸಾಹಿತ್ಯ ಕೃತಿಗಳು ಬರುತ್ತಿವೆ. ಸಹನ ವಿಜಯಕುಮಾರ್ ಅವರ ಮಾಗಧ ಕೃತಿ ಈ ಸಾಲಿಗೆ ಸೇರುತ್ತದೆ. ಹಾಸನದವರೇ ಆದ ಜಿ.ಬಿ. ಹರೀಶ್ ಅವರು ಭಾರತೀಯ ಮೂಲ ಚಿಂತನೆಗಳ ಬಗ್ಗೆ ಅನೇಕ ಪುಸ್ತಕ ಬರೆದಿದ್ದಾರೆಂದರು.

### ಆತ್ಮ ಸಂತೋಷಕ್ಕೆ ಸಾಹಿತ್ಯ

ಸಾಹಿತ್ಯ ರಚನೆಯಿಂದ ಹಣ ಸಂಪಾದನೆಯಾಗುತ್ತದೆಯೇ ಎಂದು ಕೆಲವರು ಕೇಳುತ್ತಾರೆ. ದುಡಿಮೆಯೇ ನನ್ನ ಆದ್ಯತೆಯಾಗಿದ್ದರೆ ಅದಕ್ಕೆ ಬೇರೆ ಕೆಲಸ ಮಾಡುತ್ತಿದ್ದೆ. ಬರವಣಿಗೆ, ನಾಟಕ ರಚನೆ, ಅಭಿನಯದಿಂದ ನನಗೆ ಆತ್ಮ ಸಂತೋಷ ಸಿಗುತ್ತದೆ. ಆ ಕಾರಣಕ್ಕಾಗಿ ಈ ಕ್ಷೇತ್ರವನ್ನು ಪ್ರೀತಿಯಿಂದ ಒಪ್ಪಿಕೊಂಡಿದ್ದೇನೆ ಎಂದರು.

ನಮ್ಮ ಇತಿಮಿತಿಗಳನ್ನು ಸಾಹಿತ್ಯ ಹೇಳಿಕೊಡುತ್ತದೆ. ವ್ಯಾಮೋಹದಿಂದ ದೂರ ಇರುವುದನ್ನು ಸಾಹಿತ್ಯದಿಂದ ಕಲಿಯಬಹುದು. ನಮ್ಮ ಬದುಕು ವೃತ್ತಿ ಮತ್ತು ಪ್ರವೃತ್ತಿಯನ್ನು ಅವಲಂಬಿಸಿರುತ್ತದೆ. ಪ್ರವೃತ್ತಿಯಲ್ಲಿ ಹೇಗಿದ್ದೆ ಎನ್ನುವುದರ ಮೇಲೆ ವೈಯಕ್ತಿಕ ಬದುಕನ್ನು ಅಳೆಯಲಾಗುತ್ತದೆ. ನಾಗರಿಕನಾಗಿ ನನ್ನ ಜವಾಬ್ದಾರಿ ಏನು, ಯಾವ ಕೆಲಸ ಮಾಡಬೇಕು ಹಾಗೂ ಮಾಡಬಾರದು ಎಂಬ ಕನಿಷ್ಠ ಜ್ಞಾನ ನನಗಿದ್ದರೆ ಒಳ್ಳೆಯ ಪ್ರಜೆ ಎನಿಸಿಕೊಳ್ಳುತ್ತೇನೆ. ಇಂತಹ ಸೂಕ್ಷ್ಮ ವಿಷಯಗಳನ್ನು ಕಲಿಯಲು ಸಾಹಿತ್ಯ ನೆರವಾಗುತ್ತದೆಂದು ತಿಳಿಸಿದರು.

ಯಾರು ಸರಿ ಹಾಗೂಯಾರದು ತಪ್ಪು ಎಂಬ ಜಿಂಜ್ಞಾಂಸೆಯಲ್ಲಿ ಮನುಷ್ಯ ಇರಬಾರದು. ನನ್ನಿಂದ ಯಾರಿಗೂ ಮೋಸ, ನಷ್ಟ ಆಗಬಾರದು ಎಂಬ ಜ್ಞಾನ ಇರಬೇಕು. ಯಾವ ಸಿದ್ಧಾಂತದ ಪ್ರತಿಪಾದನೆ ಏನೇ ಇದ್ದರೂ ಸಮಾನತೆಯನ್ನು ಪ್ರತಿಪಾದಿಸುವ ತತ್ವ ಸಿದ್ಧಾಂತಗಳನ್ನು ಅಳವಡಿಸಿಕೊಳ್ಳುವುದರಲ್ಲಿ ಯಾವ ತಪ್ಪಿಲ್ಲ. ಈ ಸಣ್ಣಪುಟ್ಟ ವಿಚಾರಗಳನ್ನು ತರ್ಕಕ್ಕೆ ಒಳಪಡಿಸುವ ಅವಶ್ಯಕತೆಯಿಲ್ಲ. ಭಾವನೆಯಿಂದ ಅರ್ಥೈಸಿಕೊಂಡರೆ ಮನುಷ್ಯ ಮಾನವೀಯತೆಯನ್ನು ಹೊಂದಬಹುದು ಎಂದು ಹೇಳಿದರು.

ಅಭಿವೃದ್ಧಿ ಹೆಸರಿನಲ್ಲಿ ಪ್ರಕೃತಿ ನಾಶ ಮಾಡುತ್ತಿದ್ದೇವೆ. ಎತ್ತಿನಹೊಳೆಯಿಂದ ಯೋಜನೆಯಿಂದ ಯಾರಿಗೆ ಪ್ರಯೋಜನವಾಗುತ್ತಿದೆ ಎಂಬುದು ಅರ್ಥವಾಗದ ಪ್ರಶ್ನೆ. ಕುಡಿಯುವ ನೀರಿನ ಹೆಸರಿನಲ್ಲಿ ಸಂಪದ್ಭರಿತ ಕಾಡು ನಾಶ ಮಾಡಿದ್ದೇವೆ. ಬಯಲು ಸೀಮೆ ಜಿಲ್ಲೆಗಳಿಗೆ ಅಲ್ಲ ಸಮೀಪದವರಿಗೂ ನೀರು ಸಿಗುವುದಿಲ್ಲ. ಯೋಜನೆ ಹೆಸರಿನಲ್ಲಿ ಆಗಿರುವ ಪರಿಸರ ಹಾಗು ಆರ್ಥಿಕ ನಷ್ಟದ ಲೆಕ್ಕ ಹಾಕುವವರು ಯಾರು. ಸುಸಜ್ಜಿತ ರಸ್ತೆ ನಿರ್ಮಿಸಿ ಹತ್ತು ನಿಮಿಷದಲ್ಲಿ ಸಕಲೇಶಪುರದಿಂದ ಹಾಸನಕ್ಕೆ ತಲುಪುತ್ತಿದ್ದೇವೆ ಅದೇ ದೊಡ್ಡ ಸಾಧನೆಯೆಂದು ಹೆಮ್ಮೆಪಡುತ್ತೇವೆ. ಆದರೆ 10 ನಿಮಿಷದ ವೇಗದ ಸಂಚಾರದಿಂದ ಯಾರಿಗೆ ಏನು ಪ್ರಯೋಜನವಾಯಿತು. ಮೂವತ್ತು ವರ್ಷಗಳ ಹಿಂದೆಯೂ ಇದೇ ರಸ್ತೆಯಲ್ಲಿ ಓಡಾಡುತ್ತಿದ್ದರಲ್ಲವೇ. ಇವರ ದೃಷ್ಟಿಯಲ್ಲಿ ಪ್ರಗತಿ ಎಂದರೇನೆಂದು ಪ್ರಶ್ನಿಸಿದರು.

ಬದುಕಿನ ವಾಸ್ತವ, ಕೌಟುಂಬಿಕ ಸ್ಥಿತಿಗಳನ್ನು ಆಧರಿಸಿ ಎಸ್.ಎನ್. ಸೇತುರಾಮ್ ಅವರು ರಚಿಸಿರುವ ಮಾಯಾಮೃಗ, ಮಂಥನ, ಅನಾವರಣ, ಯುಗಾಂತರ, ದಹನ, ಗತಿ, ನಿಮಿತ್ತ, ನಾವಲ್ಲ, ತಳಿ, ಅತೀತ ನಾಟಕ ಹಾಗೂ ಧಾರಾವಾಹಿಗಳ ಕುರಿತು ಸಾರ್ವಜನಿಕರ ಪ್ರಶ್ನೆಗೆ ಸಂವಾದದಲ್ಲಿ ಸೇತುರಾಮ್ ಉತ್ತರ ನೀಡಿದರು.

ಅಕ್ಷರ ಬುಕ್ ಹೌಸ್ ಮುಖ್ಯಸ್ಥ ಗಂಗಾಧರ್, ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ ಗೌರವ ಕಾರ್ಯದರ್ಶಿ ಬಿ.ಆರ್. ಬೊಮ್ಮೇಗೌಡ, ಜಾವಗಲ್ ಪ್ರಸನ್ನ ಇದ್ದರು.

# ಶಿಕ್ಷಣದಲ್ಲಿ ಆಧ್ಯಾತ್ಮ ಅಳವಡಿಕೆಯಾಗಲಿ: ಚುಂಚಶ್ರೀ

ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್



ಬೆಂಗಳೂರು: ಆಧ್ಯಾತ್ಮವನ್ನು ಶಿಕ್ಷಣ ವ್ಯವಸ್ಥೆಯಲ್ಲಿ ಅಳವಡಿಸಿಕೊಳ್ಳಲು ಸಾಧ್ಯವೇ ಎಂಬುದನ್ನು ನಾವೆಲ್ಲರೂ ಯೋಚಿಸಬೇಕಿದೆ ಎಂದು ಆದಿಚುಂಚನಗಿರಿ ಮಹಾಸಂಸ್ಥಾನ ಮಠದ ಪೀಠಾಧ್ಯಕ್ಷ ಡಾ. ಶ್ರೀ ನಿರ್ಮಲಾನಂದನಾಥ ಸ್ವಾಮೀಜಿ ಹೇಳಿದರು.

ಅಮೇರಿಕಾದ ಸ್ಯಾನ್‌ಹೋಸೆ ನಗರದಲ್ಲಿ ನಡೆದ 18ನೇ ವಿಶ್ವ ಒಕ್ಕಲಿಗ ಮಹಾಸಮ್ಮೇಳನದ ಸತ್ಸಂಗ ಅಧಿವೇಶನದಲ್ಲಿ ವಿಶೇಷ ಉಪನ್ಯಾಸ ನೀಡಿದರು.

ಆಧ್ಯಾತ್ಮಿಕತೆ ವಿಷಯದಲ್ಲಿ ಆದಿಚುಂಚನಗಿರಿ ವಿಶ್ವವಿದ್ಯಾನಿಲಯವು ಎಲ್ಲಾ ಹಂತದಲ್ಲೂ ಆದ್ಯತೆ ನೀಡಿದೆ. ಬುದ್ಧಿಯ ಪ್ರಜ್ಞೆ, ಇರುವಿಕೆಯಿಲ್ಲದೆ ಮನಸ್ಸು ಏನನ್ನೂ ಮಾಡದು. ಬುದ್ಧಿ ಇಲ್ಲದಿದ್ದರೆ ಮನಸ್ಸು, ಇಂದ್ರಿಯಗಳು ಏನನ್ನೂ ಮಾಡಲಾಗುವುದಿಲ್ಲ. ಹಾಗಾಗಿ ಇಂದ್ರಿಯಗಳು, ಮನಸ್ಸು, ಬುದ್ಧಿಯನ್ನು ಸಮಯೋಚಿತವಾಗಿ, ಸರಿದಾರಿಯಲ್ಲಿ ವಿನಿಯೋಗ ಮಾಡಲು ಮನಸ್ಸನ್ನು ಸದಾ ಎಚ್ಚರದಿಂದ ಹಿಡಿದಿಡಲು ಆಧ್ಯಾತ್ಮಿಕ ಪರಂಪರೆ ಪೂರಕವಾಗಿದೆಯೆಂದು ಸ್ವಾಮೀಜಿ ನುಡಿದರು.

ಆವಿಷ್ಕಾರ, ಸಂಶೋಧನೆ ಕುರಿತಂತೆ ಖ್ಯಾತ ವಿಜ್ಞಾನಿ ಆಲ್ಬರ್ಟ್ ಐನ್‌ಸ್ಟೀನ್ ಅವರ ಬದುಕಿನ ಕತೆಯನ್ನು ವಿವರಿಸಿದ ಸ್ವಾಮೀಜಿ, ನಾವು ಸೃಷ್ಟಿಯ ವಿಕಾಸದ ಕಡೆಗೆ ಹಾಗೆಯೇ ಸೂಕ್ಷ್ಮವಾಗಿ ನೋಡಿದರೆ ಜಡದಿಂದ ಚೇತನದ ಕಡೆಗೆ ಹೊರಟಿರುವ ನಾವುಗಳು. ನಮ್ಮ ಒಳಗಡೆ ಇರುವಂತಹ ಅನರ್ಘ್ಯ ರತ್ನಗಳ ಪ್ರಜ್ಞೆಯನ್ನು ಹೆಚ್ಚು ವಿಕಾಸ ಮಾಡಿಕೊಳ್ಳದೆ ನಾವು ಸಮಾಜದಲ್ಲಿ ಏನನ್ನೂ ಮಾಡಲಾಗುವುದಿಲ್ಲವೆಂದು ಮನವರಿಕೆ ಮಾಡಿದರು.

ಎಲ್ಲೋ ಒಂದು ದಿನ, ತುಂಬಾ ಮುಂದಕ್ಕೆ ಕ್ರಮಿಸಿ, ಶಕ್ತಿ ಎಲ್ಲಾ ಇಲ್ಲವಾಗಿ ಸಮಯ ವ್ಯರ್ಥವಾದ ನಂತರ ಕೊನೆಯಲ್ಲಿ ಬದುಕಿನ ಬಗ್ಗೆ ಚಿಂತಿಸುವ ಬದಲು, ನೀವು ವೈದ್ಯರು, ಇಂಜಿನಿಯರ್ಸ್, ಬ್ಯುಸಿನೆಸ್ ಮ್ಯಾನ್ ಏನಾಗಿರುತ್ತಿರೋ, ಪ್ರತಿಯೊಂದು ಸಂದರ್ಭದಲ್ಲೂ, ಸ್ವರೂಪವನ್ನು ನೆನಪಿನಲ್ಲಿಟ್ಟುಕೊಂಡು ನೀವು ಮಾಡುವ ಕೆಲಸವನ್ನು ಅಚ್ಚುಕಟ್ಟಾಗಿ ನಿರ್ವಹಿಸಿದರೆ ಬದುಕು ನಮ್ಮನ್ನು ಎಲ್ಲೂ ಕೂಡ ಬಾಧಿಸುವುದಿಲ್ಲ. ಆಗ ಮಾಯೆ ಎನ್ನುವ ಜಗತ್ತೂ ಕೂಡ ಹಿಂದಿನ ಶಕ್ತಿಯ ರೂಪದಲ್ಲಿ ನಮಗೆ ಕಾಣಲಿದೆಯೇ ಹೊರತು, ಬೈಗುಳಕ್ಕೆ ಕಾರಣವಾಗದು ಎಂದರು. ಅಜ್ಞಾನದಿಂದ ತುಂಬಿರುವ ನಮ್ಮ ಮನಸ್ಸನ್ನು ಜ್ಞಾನದಿಂದ ವಿಕಾಸಗೊಳಿಸಿಕೊಂಡರೆ ಶುದ್ಧಿ ಮಾಡಿಕೊಂಡರೆ ಮುಂದಿನ ನಮ್ಮ ಬದುಕನ್ನು ಸದೃಢವಾಗಿ ಕಟ್ಟಿಕೊಳ್ಳಲು ಸಾಧ್ಯವಾಗಲಿದೆಯೆಂದರು.

ನೀವು ಯಾವುದೇ ಕ್ಷೇತ್ರದಲ್ಲಿ ಕೆಲಸ ಮಾಡಿದರೂ ಆಧ್ಯಾತ್ಮಿಕತೆ ಮೈಗೂಡಿಸಿಕೊಳ್ಳುವುದು ಉತ್ತಮ. ಶುದ್ಧ ಪ್ರಜ್ಞೆ ಇಲ್ಲದೇ ಹೋದರೆ ಅಶುದ್ಧ ಮನಸ್ಸು ಬಂಧನಕ್ಕೆ ಒಳಗಾಗುತ್ತದೆ. ಪೋಷಕರು ಯಾವುದೇ ಒಂದು ಧರ್ಮಕ್ಕೆ ಸೀಮಿತವಾಗಿರದ ಆಧ್ಯಾತ್ಮಿಕತೆಯನ್ನು ಮಕ್ಕಳಿಗೆ ವಿಜ್ಞಾನದ ಆಧ್ಯಾತ್ಮಿಕ ಪರಂಪರೆಯ ಜ್ಞಾನವನ್ನು ಬೋಧಿಸಬೇಕೆಂದು ಕರೆ ನೀಡಿದರು.

### ಅದ್ಧೂರಿ ತೆರೆ

ಜು. 3 ರಿಂದ 5ರ ವರೆಗೆ ಮೂರು ದಿನಗಳ ಕಾಲ ಸ್ಯಾನ್‌ಹೋಸೆ ನಗರದ ಮೆಕನರಿ ಕನ್ವೆನ್ಷನ್ ಕೇಂದ್ರದಲ್ಲಿ ನಡೆದ ಅರ್ಥಪೂರ್ಣ ಮಹಾ ಸಮ್ಮೇಳನಕ್ಕೆ ಅರ್ಥಪೂರ್ಣ ತೆರೆ ಬಿದ್ದಿತು. ಸಪ್ತ ಸಾಗರದಾಚೆ ಕನ್ನಡ ನಾಡಿನ ಒಕ್ಕಲಿಗ ಸಂಸ್ಕೃತಿ, ಪರಂಪರೆ ಎಲ್ಲರೂ ಮೆಚ್ಚುವ ರೀತಿಯಲ್ಲಿ ಅನಾವರಣಗೊಂಡಿತು.

ಒಕ್ಕಲಿಗ ಪರಿಷತ್ ಆಫ್ ಅಮೇರಿಕಾ ಅಧ್ಯಕ್ಷ ಧನಂಜಯ್ ಕೆಂಗಯ್ಯ ಸೇರಿದಂತೆ ಹಲವಾರು ಮಂದಿಯ ಶ್ರಮ ಸಾರ್ಥಕಗೊಂಡಿತು. ವಿಶ್ವದ ನಾನಾ ಭಾಗಗಳಿಂದ ಆಗಮಿಸಿದ್ದ ಒಕ್ಕಲಿಗ ಸಮುದಾಯದ ಸದಸ್ಯರು, ವೈವಿಧ್ಯಮಯ ಸಂಸ್ಕೃತಿ, ಪರಂಪರೆ ಅನಾವರಣಕ್ಕೆ ಸಾಕ್ಷಿಯಾದರು. ಸುಗ್ಗಿ ಕುಣಿತ, ದೇವರ ಉತ್ಸವ, ಕೋಲಾಟ, ವೇಷ ಭೂಷಣ ಪ್ರದರ್ಶನ ಹಾಗು ವಿವಿಧ ಆಟೋಟಗಳು ಅವಿಸ್ಮರಣೀಯವಾಗಿದ್ದವು.

ಮೂರು ದಿನಗಳ ಕಾರ್ಯಕ್ರಮದಲ್ಲಿ ವಿಶಿಷ್ಟ ಭೋಜನ ವ್ಯವಸ್ಥೆ ಅದರಲ್ಲೂ ಮಲೆನಾಡು ಶೈಲಿ ಭೋಜನ, ಮುದ್ದೆ, ಅಕ್ಕಿರೊಟ್ಟಿ, ರುಚಿ ರುಚಿಯಾದ ಮಾಂಸಾಹಾರ, ತರೇಹೇವಾರಿ ಸಸ್ಯಾಹಾರಕ್ಕೆ ಬಹುತೇಕ ಮಂದಿ ಅಪಾರ ಮೆಚ್ಚುಗೆ ವ್ಯಕ್ತಪಡಿಸಿದರು.

ಸಮುದಾಯದ ವಧು-ವರರ ಪರಿಚಯ, ಉದ್ಯಮಿಗಳಿಗೆ ಬಿಸಿನೆಸ್ ಫೋರಂ, ಮಕ್ಕಳಿಗಾಗಿ ವಿವಿಧ ಸ್ಪರ್ಧೆ, ಮಹಿಳಾ ಚಟುವಟಿಕೆಗಳು ಸೇರಿ ಹಲವು ವಿಷಯಾಧಾರಿತ ಕಾರ್ಯಕ್ರಮಗಳು ಗಮನ ಸೆಳೆದವು.

# ಜಿಲ್ಲೆಯಲ್ಲಿ 2.78 ಲಕ್ಷ ಪೌತಿ ಖಾತೆಗೆ ಬಾಕಿ: ಕೆ.ಎನ್. ರಾಜಣ್ಣ

ಚನ್ನರಾಯಪಟ್ಟಣ: ಜಿಲ್ಲೆಯಲ್ಲಿ ಸುಮಾರು 20 ಲಕ್ಷ ಸರ್ವೆ ನಂಬರ್‌ಗಳಲ್ಲಿ 2.78 ಲಕ್ಷ ಸರ್ವೆ ನಂಬರ್ ಪೌತಿ ಖಾತೆಗೆ ಬಾಕಿ ಇದೆ. ಅರ್ಜಿಗಳ ತ್ವರಿತ ವಿಲೇವಾರಿಗೆ ಕಂದಾಯ ಇಲಾಖೆ ಸಿಬ್ಬಂದಿ ಮನೆ ಮನೆಗೆ ಭೇಟಿ ನೀಡಿ ದಾಖಲೆಗಳನ್ನು ಪಡೆದು ಪೌತಿಖಾತೆ ಪೂರ್ಣಗೊಳಿಸಲಿದ್ದಾರೆಂದು ಜಿಲ್ಲಾ ಉಸ್ತುವಾರಿ ಸಚಿವ ಕೆ.ಎನ್. ರಾಜಣ್ಣ ತಿಳಿಸಿದರು.



ಪಟ್ಟಣದ ಪ್ರವಾಸಿ ಮಂದಿರದಲ್ಲಿ ಭಾನುವಾರ ಇ-ಪೌತಿ ಖಾತೆ ಉದ್ಘಾಟಿಸಿ ಮಾತನಾಡಿದ ಅವರು, ತಲೆಮಾರುಗಳಿಂದ ಪೂರ್ವಜರ ಹೆಸರಿನಲ್ಲೇ ಆಸ್ತಿ ಮುಂದುವರೆದಿರುವುದರಿಂದ ಸರ್ಕಾರದ ವಿವಿಧ ಯೋಜನೆಗಳಡಿ ಡಿ.ಬಿ.ಟಿ. ಮೂಲಕ ಸೌಲಭ್ಯ ಪಡೆಯಲು ಸಾಧ್ಯವಾಗುತ್ತಿಲ್ಲ. ಈ ನಿಟ್ಟಿನಲ್ಲಿ ಪೌತಿ ಖಾತೆ ಆಂದೋಲನದ ಮೂಲಕ ಇ-ಪೌತಿ ಮಾಡಲಾಗುವುದು. ಅದರಿಂದ ರೈತರಿಗೆ ಅನುಕೂಲವಾಗಲಿದೆ ಎಂದರು.

ದರಖಾಸ್ತು ಪೋಡಿಯಲ್ಲಿ ರಾಜ್ಯದಲ್ಲಿ ಜಿಲ್ಲೆ ಮೊದಲ ಸ್ಥಾನದಲ್ಲಿದೆ. 10,000 ಪೋಡಿ ಪೂರ್ಣಗೊಳಿಸಲಾಗಿದೆ. ಜಿಲ್ಲಾಧಿಕಾರಿಯಿಂದ ಗ್ರಾಮ ಸಹಾಯಕರ ವರೆಗಿನ ಎಲ್ಲಾ ಸಿಬ್ಬಂದಿ ಅಪಾರ ಶ್ರಮ ವಹಿಸಿ ಕೆಲಸ ಮಾಡಿದ್ದಾರೆಂದು ಮೆಚ್ಚುಗೆ ಸೂಚಿಸಿದರು.

ಸಾರ್ವಜನಿಕರ ಸಮಸ್ಯೆಗಳನ್ನು ಬಗೆಹರಿಸುವ ನಿಟ್ಟಿನಲ್ಲಿ ಪ್ರತಿ ತಿಂಗಳ ಮೊದಲ ಶನಿವಾರ ತಹಶೀಲ್ದಾರ್ ಅಧ್ಯಕ್ಷತೆಯಲ್ಲಿ ಹಾಗೂ ಮೂರನೇ ಶನಿವಾರ ಜಿಲ್ಲಾಧಿಕಾರಿ ಅಧ್ಯಕ್ಷತೆಯಲ್ಲಿ ಜನಸ್ಪಂದನ ಕಾರ್ಯಕ್ರಮ ಕಡ್ಡಾಯವಾಗಿ ನಡೆಸುವುದರ ಮೂಲಕ ಜನರ ಸಮಸ್ಯೆಗಳನ್ನು ಪರಿಹರಿಸಲು ಸೂಚನೆ ನೀಡಲಾಗಿದೆ ಎಂದು ತಿಳಿಸಿದರು.

ಸಂಸದ ಶ್ರೇಯಸ್ ಪಟೇಲ್, ಶಾಸಕ ಸಿ.ಎನ್. ಬಾಲಕೃಷ್ಣ, ಜಿಲ್ಲಾಧಿಕಾರಿ ಕೆ.ಎಸ್. ಲತಾಕುಮಾರಿ, ಜಿಲ್ಲಾ ಪಂಚಾಯಿತಿ ಮುಖ್ಯ ಕಾರ್ಯನಿರ್ವಹಣಾಧಿಕಾರಿ ಬಿ.ಆರ್. ಪೂರ್ಣಿಮಾ, ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಮೊಹಮ್ಮದ್ ಸುಜೀತಾ, ಅಪರ ಜಿಲ್ಲಾಧಿಕಾರಿ ಕೆ.ಟಿ. ಶಾಂತಲಾ ಮತ್ತಿತರರು ಇದ್ದರು.

# ಇತಿಹಾಸದಲ್ಲಿ ಈ ದಿನ

## ಜುಲೈ -08

**1972:** ಶಿಮ್ಲಾ ಒಪ್ಪಂದ, ಭಾರತದ ಪ್ರಧಾನಿ ಇಂದಿರಾ ಗಾಂಧಿ ಮತ್ತು ಪಾಕಿಸ್ತಾನದ ಅಧ್ಯಕ್ಷ ಜುಲ್ಫಿಕರ್ ಅಲಿ ಭುಟ್ಟೋ ಶಿಮ್ಲಾ ಒಪ್ಪಂದಕ್ಕೆ ಸಹಿ ಹಾಕಿದರು. ಇದು 1971ರ ಭಾರತ-ಪಾಕಿಸ್ತಾನ ಯುದ್ಧದ ನಂತರ ಉಭಯ ರಾಷ್ಟ್ರಗಳ ನಡುವೆ ಶಾಂತಿ ಸ್ಥಾಪನೆಗಾಗಿ ನಡೆದ ಒಪ್ಪಂದವಾಗಿದೆ.

**2006:** ಶ್ರೀನಗರದಲ್ಲಿ ಉಗ್ರರು ನಡೆಸಿದ ಬಾಂಬ್ ದಾಳಿಯಲ್ಲಿ ಹಲವರು ಸಾವನ್ನಪ್ಪಿದರು.

**1497:** ವಾಸ್ಕೋಡ ಗಾಮಾ ತನ್ನ ಮೊದಲ ಸಮುದ್ರಯಾನಕ್ಕೆ ಪೋರ್ಚುಗಲ್‌ನಿಂದ ಹೊರಟರು. ಇದು ಭಾರತಕ್ಕೆ ನೇರ ಸಮುದ್ರ ಮಾರ್ಗವನ್ನು ಕಂಡುಹಿಡಿಯುವ ಪ್ರಾರಂಭವಾಗಿತ್ತು.

**1889:** ದೆಹಲಿ ದರ್ಬಾರ್ ಅನ್ನು ಬ್ರಿಟಿಷ್ ಆಡಳಿತವು ಘೋಷಿಸಿತು. ಇದನ್ನು ಭಾರತದ ಬ್ರಿಟಿಷ್ ಸಾಮ್ರಾಜ್ಯದ ಶಕ್ತಿ ಪ್ರದರ್ಶನದ ಅಂಗವಾಗಿ ನಡೆಸಲಾಗುತ್ತಿತ್ತು.

**2011:** ನಾಸಾ ಸಂಸ್ಥೆಯ ಕೊನೆಯ ಅಟ್ಲಾಂಟಿಸ್ ಶಟಲ್ ಅನ್ನು ಉಡಾಯಿಸಿತು.

### ಜನನ

**1838:** ಫರ್ಡಿನ್ಯಾಂಡ್ ವಾನ್ ಝೆಪ್ಪೆಲಿನ್ (Ferdinand von Zeppelin ), ಜರ್ಮನ್ ಎಯರ್‌ಶಿಪ್ ಆವಿಷ್ಕಾರಕ.

**1926:** ಎಬೆತ್ ಕ್ಯೂಬ್ಲರ್ ರಾಸ್, ಪ್ರಸಿದ್ಧ ಸ್ವಿಸ್-ಅಮೆರಿಕನ್ ಮಾನಸಿಕ ತಜ್ಞೆ.

### ಮರಣ

**1822:** ಪರ್ಸಿ ಬೈಸಿ ಶೆಲ್ಲಿ, ಪ್ರಸಿದ್ಧ ಇಂಗ್ಲೀಷ್ ಕವಿ.

**2014:** ಕೆನಡಾದ ವಿಜ್ಞಾನಿ ಮತ್ತು ನೊಬೆಲ್ ಪುರಸ್ಕೃತ ರಿಚರ್ಡ್ ಎರ್ಸ್‌ಟ್.

# ಹಾಸನದಲ್ಲಿ ಬಾಲ್ಯ ವಿವಾಹಕ್ಕೆ ಬೀಳುತ್ತಿಲ್ಲ ಬ್ರೇಕ್

## ಮೂರು ತಿಂಗಳಲ್ಲಿ 47 ಪ್ರಕರಣ ಬೆಳಕಿಗೆ | 35 ಮದುವೆಗೆ ತಡೆ

ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್



ಹಾಸನ: ಬಾಲ್ಯ ವಿವಾಹ ತಡೆಗೆ ಸರ್ಕಾರ ಎಷ್ಟೇ ಕಠಿಣ ಕಾನೂನು, ಜಾಗೃತಿ ಮೂಡಿಸಿದರೂ ಅಪ್ರಾಪ್ತರ ಮದುವೆಗಳು ನಡೆಯುತ್ತಲೇ ಇದ್ದು ಕಳೆದ ಮೂರು ತಿಂಗಳಲ್ಲಿ ಜಿಲ್ಲೆಯಲ್ಲಿ 47 ಪ್ರಕರಣ ಬೆಳಕಿಗೆ ಬಂದಿವೆ.

ಅದರಲ್ಲಿ 12 ಮದುವೆಯಾಗಿದ್ದರೆ 35 ವಿವಾಹಗಳು ಮಕ್ಕಳ ರಕ್ಷಣಾಧಿಕಾರಿಗಳ ತುರ್ತು ಕಾರ್ಯಾಚರಣೆಯಿಂದ ನಿಂತಿವೆ. ಈ ಸಂಬಂಧ 10 ಎಫ್‌ಐಆರ್ ದಾಖಲಾಗಿ ಎರಡು ಪ್ರಕರಣ ಸಂಬಂಧ ವಿಚಾರಣೆ ನಡೆಯುತ್ತಿದೆ. ಒಂದು ವಿವಾಹ ಮಂಡ್ಯ ಜಿಲ್ಲೆಗೆ ಸಂಬಂಧಿಸಿದ್ದಾದರೆ ಮತ್ತೊಂದು ಬಾಲಕಿಯ ವಯಸ್ಸಿನ ದೃಢತೆಗಾಗಿ ಪರಿಶೀಲನೆ ನಡೆಸಲಾಗುತ್ತಿದೆ. ಬಾಲ್ಯ ವಿವಾಹಕ್ಕೆ ಮೊದಲೆಲ್ಲ ಬಡತನ, ಅನಕ್ಷರತೆ, ಮೂಢನಂಬಿಕೆ ಕಾರಣಗಳಾಗಿರುತ್ತಿದ್ದವು. ಆದರೆ ಇತ್ತೀಚಿನ ದಿನಗಳಲ್ಲಿ ಬಾಲ್ಯ ವಿವಾಹದ ಆಯಾಮ ಬದಲಾಗಿದೆ ಎನ್ನುತ್ತಾರೆ ಅಧಿಕಾರಿಗಳು. 2024-25ರಲ್ಲಿ 129 ಬಾಲ್ಯ ವಿವಾಹ ಪ್ರಕರಣ ಬೆಳಕಿಗೆ ಬಂದಿದ್ದು ಅದರಲ್ಲಿ 115 ಮದುವೆ ತಡೆಯಲಾಗಿದೆ.

### ಬಾಲ್ಯ ವಿವಾಹಕ್ಕೆ ಪ್ರೀತಿ ಕಾರಣ

ಶಾಲೆ ಬಿಟ್ಟ ಮಕ್ಕಳು, ಪಿಯುಸಿ ವ್ಯಾಸಂಗದ ವಿದ್ಯಾರ್ಥಿನಿಯರೇ ಹೆಚ್ಚಿನ ಸಂಖ್ಯೆಯಲ್ಲಿ ಬಾಲ್ಯ ವಿವಾಹಕ್ಕೆ ಗುರಿಯಾಗುತ್ತಿದ್ದು ಅದಕ್ಕೆ ಪ್ರೀತಿ-ಪ್ರೇಮವೇ ಕಾರಣ ಎನ್ನಲಾಗಿದೆ. ಮಕ್ಕಳ ರಕ್ಷಣಾಧಿಕಾರಿಗಳು, ಸ್ಥಳೀಯ ಗ್ರಾಮ ಪಂಚಾಯಿತಿ, 1098 ಮಕ್ಕಳ ಸಹಾಯವಾಣಿ ಹಾಗೂ ಶಾಲಾ ಶಿಕ್ಷಕರಿಂದ ಬಾಲ್ಯ ವಿವಾಹ ಮಾಹಿತಿಗಳು ಬರುತ್ತಲೇ ಇರುತ್ತವೆ. ಅಧಿಕಾರಿಗಳು ಸ್ಥಳಕ್ಕೆ ತೆರಳಿ ಪರಿಶೀಲಿಸಿದಾಗ ಬಾಲ್ಯ ವಿವಾಹಕ್ಕೆ ಮೂಲ ಕಾರಣ ಪ್ರೇಮದ ಬಲೆ ಎನ್ನುತ್ತಾರೆ. ವಿದ್ಯಾಭ್ಯಾಸದ ಸಮಯದಲ್ಲಿ ಬಾಲಕಿಯರು ಪ್ರೇಮ ಬಲೆಗೆ ಬೀಳುತ್ತಾರೆ. ಆ ವಿಷಯ ಪೋಷಕರಿಗೆ ಗೊತ್ತಾಗಿ ತಮ್ಮದೇ ಜಾತಿಯ ಬೇರೆ ಹುಡುಗನನ್ನುಹುಡುಕಿ ಆತುರಾತುರವಾಗಿ ಮದುವೆಗೆ ತಯಾರಿ ಮಾಡಿಕೊಳ್ಳುತ್ತಾರೆ. ತಾನು ಪ್ರೀತಿಸಿದ ಹುಡುಗಿ ಬೇರೆಯವನನ್ನು ಮದುವೆಯಾಗುತ್ತಿದ್ದಾಳೆಂಬ ವಿಷಯ ಗೊತ್ತಾಗಿ ಪ್ರಿಯತಮ ತಕ್ಷಣ ಸಹಾಯವಾಣಿಗೆ ಕರೆ ಮಾಡಿ ಮದುವೆ ನಿಲ್ಲಿಸುತ್ತಾನೆ. ಮತ್ತೆ ಕೆಲವು ಪ್ರಕರಣಗಳಲ್ಲಿ ಹುಡುಗಿಯೇ ತನ್ನ ಪ್ರಿಯತಮ ಅಥವಾ ಸಹಾಯವಾಣಿಗೆ ಕರೆಮಾಡಿ ಮದುವೆಯ ವಿಷಯ ಹೇಳುತ್ತಾಳೆ. ಆಧುನಿಕ ತಂತ್ರಜ್ಞಾನ ಯುಗದಲ್ಲಿ ಮೊಬೈಲ್‌ಗಳು ಪ್ರೀತಿ ಪ್ರೇಮಕ್ಕೆ ಪ್ರೇರಣೆಯಾಗುತ್ತಿವೆ ಎನ್ನುತ್ತಾರೆ ಅಧಿಕಾರಿಗಳು.

**ಮೂರು ತಿಂಗಳ ಬಾಲ್ಯ ವಿವಾಹ ವಿವರ**

| | ಬೆಳಕಿಗೆ ಬಂದದ ಪ್ರಕರಣ | ನಿಲ್ಲಿಸಿದ ವಿವಾಹ | ಎಫ್‌ಐಆರ್ |
|---|---|---|---|
| ಏಪ್ರಿಲ್ | 18 | 16 | 2 |
| ಮೇ | 14 | 9 | 5 |
| ಜೂನ್ | 15 | 10 | 5 |

### ಸುಳ್ಳು ಮಾಹಿತಿಯೂ ಅಧಿಕ

ಇನ್ನು ಹೊಳೆನರಸೀಪುರ ತಾಲ್ಲೂಕಿನ ಗ್ರಾಮವೊಂದರಲ್ಲಿ ಬಾಲಕಿ ಬೇರೆ ಹುಡುಗನನ್ನು ಪ್ರೀತಿಸುವ ವಿಚಾರ ಪೋಷಕರಿಗೆ ಗೊತ್ತಾಗಿ ಬೈದು ಬುದ್ಧಿವಾದ ಹೇಳಿದ್ದರು. ಅದಕ್ಕೆ ಅವರ ಮೇಲೆ ಸಿಟ್ಟಾದ ಆಕೆ ಸಹಾಯವಾಣಿಗೆ ಕರೆ ಮಾಡಿ ತನಗೆ ಮದುವೆ ಮಾಡುತ್ತಿದ್ದಾರೆಂದು ದೂರು ನೀಡಿದ್ದಳು. ಸ್ಥಳ ಪರಿಶೀಲಿಸಿದಾಗ ಮದುವೆ ಮಾಡುತ್ತಿರುವ ಕುರಿತು ಯಾವ ಮಾಹಿತಿಯೂ ತಿಳಿದಿಲ್ಲ. ಬಾಲಕಿಯರೇ ಈ ರೀತಿ ಸುಳ್ಳು ಹೇಳಿ ಕುಟುಂಬಸ್ಥರಿಗೆ ಮುಜುಗರ ಉಂಟುಮಾಡುತ್ತಿರುವುದು ಬೆಳಕಿಗೆ ಬಂದಿದೆ.

ಬಾಲ್ಯ ವಿವಾಹ ತಡೆಗೆ ಸರ್ಕಾರ ಕಠಿಣ ಕಾನೂನು ಜಾರಿಗೊಳಿಸಿದ್ದು, ಎಲ್ಲಿಯೇ ಇಂತಹ ಪ್ರಕರಣ ಬೆಳಕಿಗೆ ಬಂದರೆ ತಕ್ಷಣವೇ ಪರಿಶೀಲಿಸಿ ಎಫ್‌ಐಆರ್ ದಾಖಲಿಸಬಹುದಾಗಿದೆ. ಪ್ರಾಥಮಿಕ ಶಾಲಾ ಮುಖ್ಯ ಶಿಕ್ಷಕರಿಗೂ ಎಫ್‌ಐಆರ್ ದಾಖಲಿಸುವ ಅಧಿಕಾರ ನೀಡಲಾಗಿದೆ. ಮೊದಲು ಗಂಡು ಹಾಗೂ ಹೆಣ್ಣಿನ ಕಡೆಯವರಿಗೆ ಬುದ್ಧಿವಾದ ಹೇಳಿಕೆ ಮುಚ್ಚಳಿಕೆ ಬರೆಸಿಕೊಂಡು ಪ್ರಕರಣ ಇತ್ಯರ್ಥ ಮಾಡಲಾಗುತ್ತಿತ್ತು. ಆದರೆ ಈಗ ಎಫ್‌ಐಆರ್ ಕಡ್ಡಾಯವಾಗಿದೆ. ಮಕ್ಕಳ ಸಹಾಯವಾಣಿ ನಿರ್ವಹಣೆಯನ್ನು ಮೊದಲು ಎನ್‌ಜಿಓ ನಡೆಸುತ್ತಿದ್ದವು. 2023ರ ಸೆಪ್ಟೆಂಬರ್‌ನಿಂದ ಸಹಾಯವಾಣಿಯೂ ಮಕ್ಕಳ ರಕ್ಷಣಾ ಘಟಕಕ್ಕೆ ಒಳಪಟ್ಟಿರುವುದರಿಂದ ತ್ವರಿತ ಕಾರ್ಯಾಚರಣೆಗೆ ನೆರವಾಗಿದೆ.

### ಹತ್ತು ಹಲವು ಕಾರ್ಯಕ್ರಮ

ಬಾಲ್ಯ ವಿವಾಹ, ಚೈಲ್ಡ್ ಪೊರ್ನೋಗ್ರಾಫಿ, ಮಿಷನ್ ವಾತ್ಸಲ್ಯ, ಅಪ್ರಾಪ್ತ ಮಕ್ಕಳ ಮದುವೆಯಿಂದಾಗುವ ದುಷ್ಪರಿಣಾಮಗಳ ಕುರಿತು ಜಿಲ್ಲಾ ಮಕ್ಕಳ ರಕ್ಷಣಾ ಘಟಕ ಹತ್ತು ಹಲವು ಕಾರ್ಯಕ್ರಮಗಳನ್ನು ಹಾಕಿಕೊಂಡಿದೆ. ಶಾಲಾ ಕಾಲೇಜುಗಳಲ್ಲಿ ಕಾರ್ಯಾಗಾರ, ಭಿತ್ತಿ ಪತ್ರ ವಿತರಣೆ, ವಿದ್ಯಾರ್ಥಿಗಳಿಗೆ ನೆರವಾಗುವ ನಿಟ್ಟಿನಲ್ಲಿ ಸಮಗ್ರ ಮಾಹಿತಿಯನ್ನೊಳಗೊಳ ಸ್ಮಾರ್ಟ್ ಕಾರ್ಡ್ ವಿತರಣೆ ಸಹ ಮಾಡಲಾಗುತ್ತಿದೆ.

Printed, Published and Owned by Manjunatha B.R. and Printed at PAPPAS PRINT HOUSE, BEHIND DISTRICT STADIUM, M.G.ROAD,VIDYANAGAR, HASSAN, KARNATAKA-573201 and published at No. 150, BANAVASE, SAKALESHPURA TALLUK, HASSAN DISTRICT, KARNATAKA-573201. Editor: MANJU BANAVASE. Ph: 8762954248